ಸಂಪುಟ: 14 ಸಂಚಿಕೆ: 11 | ಪುಟಗಳು 08 | ಸೋಮವಾರ 13 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450, 9845028349

Volume 14 Issue 11 Pages 08

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

ಬೆಳಗು

ಅನ್ಯರನ್ನು ಆಳು ಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.

–ದ.ರಾ.ಬೇಂದ್ರೆ

ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ



ವಿಧಾನ ಸಭೆಯ ಸ್ಪೀಕರ್ ಯು.ಟಿ. ಖಾದರ್ ಅವರಿಂದ ಮಲ್ಲಮ್ಮ ನುಡಿ ಯುಗಾದಿ ವಿಶೇಷಾಂಕ ಲೋಕಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಪಾದಕ ರಮೇಶ್ ರೆಡ್ಡಿ,ಪ್ರಧಾನ ಸಂಪಾದಕ ಡಾ.ಎಂ.ಮಹ್ಮದ್ ಬಾಷ ಗೂಳ್ಯಂ, ಜಿಲ್ಲಾ ವರದಿಗಾರ ಸತೀಶ್ ತುಪ್ಪದ್ ಇದ್ದರು.

ಯುವೋತ್ಸವ- ಉದ್ಯೋಗ ಮೇಳ

ಬೆಂಗಳೂರು: ಬಸವ ಜಯಂತಿಯ ಅಂಗವಾಗಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಶನ್ ಸಹಯೋಗದಲ್ಲಿ ಯುವೋತ್ಸವ–ಉದ್ಯೋಗ ಮೇಳ 2026 ಅನ್ನು ಮಲ್ಲೇಶ್ವರಂನ ಎಸ್ಎಚ್ಜಿಎನ್ಎಂ ಸರ್ಕಾರಿ ಮಹಿಳಾ ಪದವಿಪೂರ್ವ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಉಪಮುಖ್ಯಮಂತ್ರಿಮತ್ತು ಶಾಸಕ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ್ ತಿಳಿಸಿದ್ದಾರೆ. ಮಲ್ಲೇಶ್ವರಂನ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಯಕವೇ ಕೈಲಾಸ ಎಂಬ ತತ್ವವನ್ನು ಜಗತ್ತಿಗೆ ನೀಡಿದ ಭಕ್ತಿ ಭಂಡಾರಿ ಬಸವಣ್ಣನವರನ್ನು ನಾವು ಪೂಜಿಸುತ್ತೇವೆ, ಆರಾಧಿಸುತ್ತೇವೆ. ಆದ್ದರಿಂದ ಅವರ ಜಯಂತಿಯ ಅಂಗವಾಗಿ ಈ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದಿದ್ದಾರೆ.

ಗಾಯಕಿಗೆ ಮುಖ್ಯಮಂತ್ರಿ ಸಂತಾಪ

ಬೆಂಗಳೂರು: ಭಾರತೀಯ ಚಿತ್ರರಂಗದ ಖ್ಯಾತ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಅವರ ನಿಧನದಿಂದ ದುಃಖಿತನಾಗಿದ್ದೇನೆ. ಕಳೆದ ಹಲವು ದಶಕಗಳಿಂದ ಸುಮಾರು 12,000ಕ್ಕೂ ಅಧಿಕ ಹಾಡುಗಳ ಮೂಲಕ ಸಂಗೀತ ಪ್ರಿಯರನ್ನು ರಂಜಿಸಿದ ಸ್ವರ ಸಾಮ್ರಾಜ್ಞಿಯನ್ನು ಕಳೆದುಕೊಂಡು ಚಿತ್ರರಂಗ ಬಡವಾಗಿದೆ. ತಮ್ಮ ಸುಮಧುರ ಧ್ವನಿ, ಸರಳ ನಡೆ ನುಡಿ, ವಾತ್ಸಲ್ಯ ತುಂಬಿದ ಮಾತುಗಳಿಂದ ಅವರು ಜನಮಾನಸದಲ್ಲಿ ಶಾಶ್ವತ. ಆಶಾ ಭೋಸ್ಲೆಯವರ ನಿಧನದಿಂದ ಹಳೆಯ ಮತ್ತು ಹೊಸ ತಲೆಮಾರಿನ ಸಂಗೀತದ ಬಹುದೊಡ್ಡ ಕೊಂಡಿಯೊಂದು ಕಳಚಿದಂತಾಗಿದ ಎಂದು ಸಿಎಂ ಕಂಬನಿ ಮಿಡಿದಿದ್ದಾರೆ.

ಏಪ್ರಿಲ್ 15 ಪ್ರಧಾನಿ ಮಂಡ್ಯ ಭೇಟಿ

ಮಂಡ್ಯ: ಪ್ರಧಾನಿ ನರೇಂದ್ರ ಮೋದಿ ಏಪ್ರಿಲ್ 15 ಮಂಡ್ಯಕ್ಕೆ ಭೇಟಿ ನೀಡಲಿದ್ದಾರೆ. ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿ ಮಾಜಿ ಪೀಠಾಧಿಪತಿ ಬಾಲಗಂಗಾಧರನಾಥ ಸ್ವಾಮೀಜಿ ಅವರ ಹೊಸ ಗದ್ದುಗೆಯನ್ನು ಉದ್ಘಾಟಿಸಲಿದ್ದಾರೆ. ನಂತರ ಬಿಜಿಎಸ್ ಮೈದಾನದಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾಡಳಿತ ಇದಕ್ಕಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ. ಏಪ್ರಿಲ್ 15 ರಂದು ಬೆಳಿಗ್ಗೆ ದೆಹಲಿಯಿಂದ ಹೊರಟು ಬೆಂಗಳೂರಿನ ಎಚ್ಎಎಲ್ ವಿಮಾನ ನಿಲ್ದಾಣ ತಲುಪಲಿರುವ ಮೋದಿ, ಅಲ್ಲಿಂದ ಬೆಳಿಗ್ಗೆ 10:50 ರ ಸುಮಾರಿಗೆ ಹೆಲಿಕಾಪ್ಟರ್ ಮೂಲಕ ಆದಿಚುಂಚನಗಿರಿ ಹೆಲಿಪ್ಯಾಡ್ ತಲುಪಲಿದ್ದಾರೆ.

ಮಾನದಂಡದೊಂದಿಗೆ ವಿತರಣೆಗೆ ರಘು ಕರೆ 6 | ಆರೋಗ್ಯಕರ ಜೀವನ ಶೈಲಿಗೆ ವ್ಯಾಯಾಮ 7 | ಸಂಘದ 40ನೇ ರಾಜ್ಯ ಸಮ್ಮೇಳನಕ್ಕೆ ತೆರೆ 8

ಹೊರ್ಮುಜ್ ತೆರವಿಗೆ ಅಮೆರಿಕ ಸಜ್ಜು

• ಮಲ್ಲಮ್ಮ ನುಡಿ ವಾರ್ತೆ ತೆಹರಾನ್

ಹೊರ್ಮುಜ್‌ನಲ್ಲಿನ ಸೀ ಮೈನ್ ತೆರವುಗೊಳಿಸಲು ಸಾಗುತ್ತಿರುವ US ನೌಕೆ ಅಮೆರಿಕ–ಇರಾನ್ ನಡುವಿನ ಅಸ್ಥಿರತೆ ಮಧ್ಯೆ ಅಮೆರಿಕಾದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ತಮ್ಮ ಅಧಿಕೃತ X ಖಾತೆಯ ಮೂಲಕ US ಸೆಂಟ್ರಲ್ ಕಮಾಂಡ್‌ನ ಹೇಳಿಕೆಯನ್ನು ಹಂಚಿಕೊಂಡು ಹೊರ್ಮುಜ್ ನಲ್ಲಿ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಹೂತಿಟ್ಟಿರುವ ಸಮುದ್ರ ಮೈನ್‌ಗಳು ಅಥವಾ ಸ್ಫೋಟಕಗಳನ್ನು ಸಂಪೂರ್ಣವಾಗಿ ತೆರವುಗೊಳಿಸುವ ವಿಶಾಲ ಕಾರ್ಯಚರಣೆಯ ಭಾಗವಾಗಿ ಯುಎಸ್ ಎಸ್ ಫ್ರಾಂಕ್ ಇ. ಪೀಟರ್ಸನ್ (DDG 121) ಮತ್ತು ಯುಎಸ್ಎಸ್ ಮೈಕೆಲ್ ಮರ್ಫಿ (DDG 112)



ಹೊರ್ಮುಜ್ ಜಲಸಂಧಿಯನ್ನು ದಾಟುವ ಮೂಲಕ ಅರೇಬಿಯನ್ ಕೊಲ್ಲಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದೆ ಎಂದು ಬರೆದುಕೊಂಡಿದ್ದನ್ನು ಸ್ಮರಿಸಬಹುದು.

ಆಬ್ಬಾರ್ ವಿರುದ್ಧ ಮಲ್ಲಿಕಾರ್ಜುನ್ ಕಿಡಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಕಾಂಗ್ರೆಸ್ ಋಣ ಇದೆ, ಪಕ್ಷದ ಅನ್ನ ತಿಂದ ಮೇಲೆ ಕೆಲಸ ಮಾಡಬೇಕಿತ್ತು ಎಂದು ಸಚಿವ ಎಸ್ಎಸ್ ಮಲ್ಲಿಕಾರ್ಜುನ್ ಅವರು ಎಂಎಲ್ಸಿ ಅಬ್ದುಲ್ ಜಬ್ಬಾರ್ ವಿರುದ್ಧ ಕಿಡಿಕಾರಿದ್ದಾರೆ.

ದಾವಣಗೆರೆಯಲ್ಲಿ ಸುದ್ದಿಗೋಷ್ಠಿನಡೆಸಿದ ಎಸ್ಎಸ್ ಮಲ್ಲಿಕಾರ್ಜುನ್ ಅವರು ಪ್ರಚಾರಕ್ಕೆ ಕರೆದರೆ ಬರುತ್ತಿದ್ದೆ ಎಂಬ ಎಂಎಲ್ಸಿ ಜಬ್ಬಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದರು. ಅವರ ಮೇಲೆ ಕಾಂಗ್ರೆಸ್ ಪಕ್ಷದ ಋಣ ಇದೆ. ಕಾಂಗ್ರೆಸ್ ಪಕ್ಷದ ಅನ್ನ ತಿಂದ್ಮೇಲೆ ಬಂದು ಪ್ರಚಾರ ಕೆಲಸ ಮಾಡಬೇಕಿತ್ತು ಎಂದು ತಿಳಿಸಿದ್ದಾರೆ.

ದಾವಣಗೆರೆ ಕಾಂಗ್ರೆಸ್ ಅಭ್ಯರ್ಥಿಯನ್ನು ಎಲ್ಲರ ಸಮ್ಮುಖದಲ್ಲಿಯೇ ಮಾತನಾಡಿದ್ದರು. ಹೈಕಮಾಂಡ್ ಸೂಚನೆಯಂತೆ ಟಿಕೆಟ್ ಸಿಕ್ಕಿದೆ. ಇಂತಹ ಸಂದರ್ಭದಲ್ಲಿ ಹೈಮಾಂಡ್ ನಿರ್ಧಾರಕ್ಕಾದರೂ ಜಬ್ಬಾರ್ ಬೆಲೆಕೊಡಬೇಕಿತ್ತು ಎಂದು ಹೇಳಿದ್ದಾರೆ. ಜಬ್ಬಾರ್ ಅವರನ್ನ ಮೂರು ಬಾರಿಯಿಂದ ನಾನು ನಮ್ಮ ಅಪ್ಪಾಜಿ (ಶಾಮನೂರು ಶಿವಶಕರಪ್ಪ) ಸೇರಿ ಎಂಎಲ್ಸಿ ಮಾಡಿಸಿದ್ದು. ಮೊದಲ ಬಾರಿ ಅವಧಿ ಮುಗಿದ ಬಳಿಕ ಸಿದ್ದರಾಮಯ್ಯನವರಿಗೆ ಹೇಳಿ, ಹೈಕಮಾಂಡ್ಗೆ ಮನವಿ ಮಾಡ್ಕೊಂಡು ಆಮೇಲೆ ಇನ್ನೊಂದು ಅವಧಿಗೆ ವಿಸ್ತರಣೆ ಮಾಡಿಸಿಕೊಟ್ಟಿವು. ಆ ನಂತರ 3 ನೇ ಅವಧಿಗೂ ವಿಸ್ತರಣೆಯಾಗಿದೆ. ಇದರ ಋಣ ಇಲ್ಲವೇ? ಎಂದು ಪ್ರಶ್ನೆ ಮಾಡಿದ್ದಾರೆ.

ಕೈ ಬಂಡಾಯಕ್ಕೆ ತಲೆದಂಡ

ಬೈ ಎಲೆಕ್ಷನ್ ವೇಳೆ ಭಿನ್ನತೆ ತೋರಿದ ಕಾಂಗ್ರೆಸ್‌ನ ಕೆಲವು ನಾಯಕರ ವಿರುದ್ಧ ಹೈಕಮಾಂಡ್ ಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬೈ ಎಲೆಕ್ಷನ್ ವೇಳೆ ಬಂಡಾಯವೆದ್ದಿದ್ದ ಕಾಂಗ್ರೆಸ್‌ನ ಕೆಲವು ನಾಯಕರ ತಲೆ ದಂಡವಾಗಿದೆ. ವಿಶೇಷವಾಗಿ ದಾವಣಗೆರೆ ವಿಧಾನಸಭೆಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಷಡ್ಯಂತ್ರದ ಆರೋಪಕ್ಕೆ ಬೆಲೆ ತೆರಬೇಕಾಗಿದೆ. ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದರು. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡುವಂತೆ ನಾಸೀರ್ ಅಹ್ಮದ್‌ಗೆ ಎಐಸಿಸಿ ಹೈಕಮಾಂಡ್ ಸೂಚನೆ ನೀಡಿದ್ದು, ಜಮೀರ್ ಅಹ್ಮದ್ ತಲೆದಂಡಕ್ಕೂ ಪಕ್ಷದಲ್ಲಿ ಒತ್ತಡ ಹೆಚ್ಚಿದೆ.

ಸೋಲಿಗೆ ಹುನ್ನಾರ: ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡಲಿಲ್ಲ ಎಂಬ ಕಾರಣದ ಜೊತೆಗೆ ಅಧಿಕೃತ ಅಭ್ಯರ್ಥಿ ಸೋಲಿಸಲು ಹುನ್ನಾರ ನಡೆಸಲಾಗಿದೆ. ಎಸ್‌ಡಿಪಿಐ ಅಭ್ಯರ್ಥಿಗೆ ಅಗತ್ಯ ಸಹಕಾರ ನೀಡಲಾಯಿತು ಎಂಬ ಗಂಭೀರ ಆಪಾದನೆಯಿಂದ ಎಐಸಿಸಿ ಹೈಕಮಾಂಡ್ ಕೆಂಡಾಮಂಡಲವಾಗಿದೆ.

ಅಭಿಷೇಕ್ ದತ್ತ ವರದಿ: ಪದಚ್ಯುತಿ ಸುಳಿವರಿತ ಜಬ್ಬಾರ್ ಪಕ್ಷದ ಹುದ್ದೆಗೆ ರಾಜೀನಾಮೆ ನೀಡಿದ್ದು, ನಾಸಿರ್ ಅಹ್ಮದ್‌ಗೂ ಸಂಪುಟ ದರ್ಜೆ ಸ್ಥಾನಮಾನದ ಪದತ್ಯಾಗಕ್ಕೆ ಸೂಚನೆ ನೀಡಲಾಗಿದೆ. ದೂರು, ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ತ ವರದಿಯಂತೆ ವರಿಷ್ಠರು ತಲೆದಂಡದ ಪ್ರಕ್ರಿಯೆ ಆರಂಭಿಸಿದ್ದಾರೆ.



ಕಣ್ಣಿಟ್ಟಿದ್ದ ಸುರ್ಜೇವಾಲ

ದಾವಣಗೆರೆ ದಕ್ಷಿಣದಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ಬೇಡಿಕೆಗೆ ಪಕ್ಷದಿಂದ ಸ್ಪಂದನೆ ಸಿಗದ ಹಿನ್ನೆಲೆಯಲ್ಲಿ ನಡೆಯುತ್ತಿದ್ದ ಪ್ರತಿ ಬೆಳವಣಿಗೆಗಳ ಬಗ್ಗೆ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕಣ್ಣಿಟ್ಟಿದ್ದರು. ಎಂಎಲ್ಸಿ ಅಬ್ದುಲ್ ಜಬ್ಬಾರ್ ಅವರು ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗಕ್ಕೆ ನೀಡಿದ ರಾಜೀನಾಮೆಯನ್ನು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅಂಗೀಕಾರ ಮಾಡಿದ್ದಾರೆ. ಅಲ್ಪಸಂಖ್ಯಾತ ವಿಭಾಗ ಸಮಿತಿಯನ್ನೂ ವಿಸರ್ಜಿಸಲಾಗಿದೆ.

ಮಂತ್ರಿ ಸ್ಥಾನಕ್ಕಾಗಿ ದಿಲ್ಲಿಗೆ

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸಿಎಂ ಸ್ಥಾನ ಮುಂದುವರಿಕೆ, ಸಚಿವಸಂಪುಟ ಪುನಾರಚನೆ ಕುರಿತು ಸ್ಪಷ್ಟತೆ ಪಡೆಯಲು ಕಾಂಗ್ರೆಸ್ ಹೈಕಮಾಂಡ್‌ನ್ನು ಭೇಟಿ ಮಾಡುವುದಕ್ಕೂ ಮುನ್ನವೇ, 25–30 ಕಾಂಗ್ರೆಸ್ ಶಾಸಕರ ಗುಂಪೊಂದು ದೆಹಲಿಗೆ ತೆರಳಿ ಸಚಿವ ಸ್ಥಾನಕ್ಕೆ ಬೇಡಿಕೆಯಿಡಲು ಭಾನುವಾರ ಮುಂದಾಗಿವೆ.

ಸಚಿವ ಸ್ಥಾನಾಕಾಂಕ್ಷಿಗಳು..?

ಸುಬ್ಬಾರೆಡ್ಡಿ, ಪುಟ್ಟರಂಗ ಶೆಟ್ಟಿ, ಹಂಪನಗೌಡ ಬಾದರ್ಲಿ, ಬಿ.ಜಿ. ಶಾಂತನಗೌಡ, ಎ.ಟಿ. ಪಾಟೀಲ್, ಎ.ಆರ್. ಕೃಷ್ಣಮೂರ್ತಿ, ಪ್ರಸಾದ್ ಅಬ್ಬಯ್ಯ, ಯು.ಬಿ. ಬಣಕಾರ್, ಜಿ.ಎಸ್. ಪಾಟೀಲ್, ಯಶವಂತರಾಯಗೌಡ ಪಾಟೀಲ್, ಕೆ. ಷಡಕ್ಷರಿ, ಅಶೋಕ್ ಪಟ್ಟಣ, ಟಿ.ಬಿ. ಜಯಚಂದ್ರ, ಎಸ್.ಎನ್. ನಾರಾಯಣಸ್ವಾಮಿ, ಲಕ್ಷ್ಮಣ ಸವದಿ, ಅಪ್ಪಾಜಿ ನಾಡಗೌಡ, ರಮೇಶ್ ಬಂಡಿಸಿದ್ದೇಗೌಡ ಸೇರಿ ಇತರರಿದ್ದಾರೆ.

ಖರ್ಗೆ ಗಮನಕ್ಕೆ

ಸಚಿವ ಸಂಪುಟ ಪುನಾರಚನೆಗೆ ಹೈಕಮಾಂಡ್‌ಗೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ ಎಂದು ಟಿ ಬಿ ಜಯಚಂದ್ರ ತಿಳಿಸಿದ್ದಾರೆ. ಮುಂದಿನ ಎರಡು ವರ್ಷಗಳಲ್ಲಿ ಪಕ್ಷದಲ್ಲಿ ಸದಸ್ಯರೊಳಗೆ ಸಮಸ್ಯೆ, ಭಿನ್ನಾಭಿಪ್ರಾಯ ಬರದಂತೆ, ಇತರರಿಗೂ ಅವಕಾಶ ನೀಡಬೇಕು ಎಂಬುದು ಮುಖ್ಯ ಬೇಡಿಕೆಯಾಗಿದೆ. ಈ ಮನವಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮುಂದೆ ಇಡಲಾಗುತ್ತದೆ ಎಂದು ವರದಿಗಾರರಿಗೆ ಮಾಹಿತಿ ನೀಡಿದ್ದಾರೆ.

ರಾಜಿನಾಮೆ ಓಕೆ, ಆದ್ರೆ!

ಅಬ್ದುಲ್ ಜಬ್ಬಾರ್ ಅವರನೇತೃತ್ವದಲ್ಲಿರಚಿಸಲಾಗಿದ್ದ ಅಲ್ಪಸಂಖ್ಯಾತ ವಿಭಾಗದ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜಿಸಲಾಗಿದೆ. ನೂತನ ಸಮಿತಿ ಶೀಘ್ರ ರಚನೆಗೆ ಕ್ರಮ ವಹಿಸಲಾಗಿದೆ ಎಂದು ಶಿವಕುಮಾರ್ ಹೇಳಿದ್ದಾರೆ. ಅಬ್ದುಲ್ ಜಬ್ಬಾರ್ ಅವರು ಕೇವಲ ಪಕ್ಷದ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಆದರೆ, ಅವರ ವಿಧಾನ ಪರಿಷತ್ ಸ್ಥಾನ ಮುಂದುವರೆಯಲಿದೆ ಎನ್ನಲಾಗಿದೆ.

ಕೇಂದ್ರ ಸಚಿವ ತೋರಿದ ಮಾನವೀಯತೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ರಾಜಕಾರಣಿಗಳು ರಾಜಕೀಯಕ್ಕೆ ಮಾತ್ರವಲ್ಲ ಸಮಯ ಬಂದರೆ ಅವರು ಮಾನವೀಯತೆಗೂ ಸಾಕ್ಷಿಯಾಗುತ್ತಾರೆ ಎನ್ನುವುದಕ್ಕೆ ಎಚ್ಡಿಕೆ ಸಾಕ್ಷಿಯಾಗಿದ್ದಾರೆ.

ಖಾಸಗಿ ಕಾರ್ಯಕ್ರಮದ ನಿಮಿತ್ತ ಕೇಂದ್ರ ಸಚಿವರು ಹಾಸನಕ್ಕೆ ತೆರಳುವಾಗ ಬೆಂಗಳೂರು–ಹಾಸನ ಹೆದ್ದಾರಿಯಲ್ಲಿ ಆಟೋ ಮತ್ತು ಕಾರು ನಡುವೆ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ವಿಕ್ರಂ ಅವರನ್ನ ಕೇಂದ್ರಸಚಿವರು ಆಸ್ಪತ್ರೆಗೆ ದಾಖಲಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಇನ್ನು ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿಯನ್ನು ಅರ್ಧ ಗಂಟೆಯಿಂದ ಯಾರು ಗಮನಿಸದೆ ರಸ್ತೆಯಲ್ಲಿಯೇ ಇದ್ದಿದ್ದನ್ನ ನೋಡಿ ಪೊಲೀಸ್ ವಾಹನದಲ್ಲಿ ಆದಿಚುಂಚನಗಿರಿ ಆಸ್ಪತ್ರೆಗೆ ಕಳುಹಿಸಿ, ಸೂಕ್ತ ಚಿಕಿತ್ಸೆ ನೀಡುವಂತೆ ಅಲ್ಲಿನ ವೈದ್ಯರಿಗೆ ದೂರವಾಣಿ ಕರೆ ಮಾಡಿ ತಕ್ಷಣ ಸ್ಪಂದಿಸುವಂತೆ ತಿಳಿಸಿದೆ.

ಮೂಲ ಸೌಲಭ್ಯಕ್ಕಾಗಿ ಸಿಎಂಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಶಹಾಬಾದ ತಾಲೂಕಿನಲ್ಲಿ ಹಲವು ವರ್ಷಗಳಿಂದ ಬಾಕಿ ಇರುವ ಮೂಲಭೂತ ಸೌಲಭ್ಯಗಳ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಜೆಡಿಎಸ್ ಶಹಾಬಾದ ತಾಲೂಕ ಅಧ್ಯಕ್ಷ ಅಬ್ದುಲ್ ಗನಿ ಸಾಬೀರ್ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಅವರು ಸಲ್ಲಿಸಿದ ಮನವಿಯಲ್ಲಿ, ಶಹಾಬಾದ್ ತಾಲೂಕು ಕಾರ್ಮಿಕರ ಪ್ರದೇಶವಾಗಿದ್ದು, ತಾಲೂಕು ಕೇಂದ್ರವಾಗಿ ಘೋಷಣೆಯಾದರೂ ಅಗತ್ಯ ಸೌಲಭ್ಯಗಳು ಇನ್ನೂ ಲಭ್ಯವಾಗಿಲ್ಲ ಎಂದು ತಿಳಿಸಲಾಗಿದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆಯಡಿ ವಿಶೇಷ ಅನುದಾನ ಮೀಸಲಾಗಿದ್ದರೂ, ಇದುವರೆಗೆ ಶಹಾಬಾದ್‌ಗೆ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ ಹಾಗೂ ಅಭಿವೃದ್ಧಿ ಕಾಮಗಾರಿಗಳು ನಡೆದಿಲ್ಲ ಎಂದು ಆರೋಪಿಸಲಾಗಿದೆ. ಕೇಂದ್ರಕ್ಕೆ ತಕ್ಕಂತೆ ಆಡಳಿತಾತ್ಮಕ ಕಚೇರಿಗಳು ಸ್ಥಾಪನೆಯಾಗಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 100 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸುವ ಘೋಷಣೆ ಜಾರಿಗೆ ಬಂದಿಲ್ಲ.

ಗಾಯನ ತೊರೆದ ಅಮರ ಗಾಯಕಿ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಅವರು ಭಾನುವಾರ ನಿಧನರಾಗಿದ್ದಾರೆ. ಆರೋಗ್ಯವಿಕಾವಿಕಿ ಹದಗೆಟ್ಟ ಹಿನ್ನೆಲೆಯಲ್ಲಿ ಅವರನ್ನು ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ನಿನ್ನೆ ದಾಖಲಿಸಲಾಗಿತ್ತು. ಗಾಯಕಿಯ ಮೊಮ್ಮಗಳು ಜನೈ ಭೋಸ್ಲೆ ಈ ಮಾಹಿತಿ ನೀಡಿದ್ದಾರೆ. ಆಶಾ ಭೋಸ್ಲೆ ಅವರಿಗೆ 92 ವರ್ಷವಾಗಿತ್ತು.

ವೃತ್ತಿಜೀವನ: ಪಿಯಾ ತು ಅಬ್ ತೋ ಆಜಾ, ಕಜ್ರಾ ಮೊಹಬ್ಬತ್ ವಾಲಾ, ರಂಗೀಲಾ ರೇ ಮತ್ತು ದಿಲ್ ಚೀಜ್ ಕ್ಯಾ ಹೈ ಎಂಬ ಪ್ರಸಿದ್ಧ ಹಾಡುಗಳ ಮೂಲಕ ಹೆಸರುವಾಸಿಯಾದ ಆಶಾ ಭೋಸ್ಲೆ ಅವರು ಈ ವರ್ಷದ ಸೆಪ್ಟೆಂಬರ್ 8ರಂದು 93ನೇ ವಯಸ್ಸನ್ನು ಪೂರ್ಣಗೊಳಿಸಬೇಕಾಗಿತ್ತು. ಅವರ ನಿಧನವು, ಅವರ ಹಾಡುಗಳನ್ನು ಕೇಳುತ್ತ ಬೆಳೆದ ಅನೇಕ ಸಂಗೀತಪ್ರಿಯರ ಮನಗಳಲ್ಲಿ ಆಘಾತವನ್ನು ಉಂಟುಮಾಡಿದೆ.

ಅರಸಿಬಂದ ಭರಪೂರ ಪ್ರಶಸ್ತಿಗಳು

ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಅವರ ಸಹೋದರಿಯಾದ ಆಶಾ ಭೋಸ್ಲೆ, ಅನೇಕ ಭಾರತೀಯ ಭಾಷೆಗಳ ಸಾವಿರಾರು ಹಾಡುಗಳಿಗೆ ಧ್ವನಿಯಾಗಿದ್ದರು. ಅವರ ಶಾಶ್ವತ ಹಿಟ್ಗಳಲ್ಲಿ 'ಅಭಿ ನ ಜಾವೋ ಛೋಡ್ ಕರ್', 'ಇನ್ ಆಂಖೋನ್ ಕಿ ಮಸ್ತಿ', 'ದಿಲ್ ಚೀಜ್ ಕ್ಯಾ ಹೈ', 'ಪಿಯಾ ತು ಅಬ್ ತೋ ಆಜಾ', 'ದುನಿಯಾ ಮೇನ್ ಲೋಗೋನ್ ಕೋ' ಮತ್ತು 'ಜರಾ ಸಾ ಝೂಮ್ ಲೂನ್ ಮೇನ್' ಸೇರಿವೆ

ಅಗ್ನಿಶಾಮಕದಿಂದ ಅಣಕು ಪ್ರದರ್ಶನ




• ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನಾ (ಎನ್.ಎಸ್.ಎಸ್) ಘಟಕ ವತಿಯಿಂದ ಆಯೋಜಿಸಿದ ವಾರ್ಷಿಕ ಶಿಬಿರದ ಐದನೇ ದಿನವಾದ ರವಿವಾರ ಅಗ್ನಿಶಾಮಕ ದಳದಿಂದ ಅಣಕು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅಗ್ನಿಶಾಮಕ ದಳ ಅಧಿಕಾರಿ ಅರುಣಕುಮಾರ ಅವರು ವಿಪತ್ತು ನಿರ್ವಹಣೆಯನ್ನು ಕುರಿತು ವಿಶೇಷ ಉಪನ್ಯಾಸ ನೀಡಿದರು. ಬೆಂಕಿಗಳ ವಿಧಗಳು ಯಾವುವು ಮತ್ತು ತುರ್ತು ಸಂದರ್ಭದಲ್ಲಿ ಅವುಗಳನ್ನು ನಂದಿಸಲು ಅನುಸರಿಸಬೇಕಾದ ತಂತ್ರಗಳು, ಮಾರ್ಗೋಪಾಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಸುನೀಲಕುಮಾರ ಅವರು, ಬೆಂಕಿ ನಂದಿಸುವ ವಿಧಗಳನ್ನು ಅಗ್ನಿಶಾಮಕ ದಳದವರ ಉಪಕರಣಗಳಿಂದ ತಿಳಿಸಿಕೊಟ್ಟರು. ಬೆಂಕಿ ನಂದಿಸುವ ಸಂದರ್ಭದಲ್ಲಿ ಬಳಸುವ ಸಮವಸ್ತ್ರಗಳ ಕುರಿತು, ನೀರಿನಿಂದ ಉಂಟಾಗುವ ಸಮಸ್ಯೆಗಳಿಗೆ ಹೇಗೆ ಸ್ಪಂದಿಸಬೇಕು, ಕೆಲವು ಉರಗ ಮತ್ತು ಪ್ರಾಣಿಗಳಿಂದ ಜನರನ್ನು ಮತ್ತು ನಮ್ಮನ್ನು ನಾವು ಹೇಗೆ ರಕ್ಷಿಸಿಕೊಳ್ಳಬೇಕು ಮೊದಲಾದ ವಿಷಯಗಳನ್ನು ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಮೇಜರ್ ರವಿ ಪಡಗಿ ಮಾಜಿ ಸೈನಿಕರು, ಕಾಲೇಜಿನ ಪ್ರಾಂಶುಪಾಲ ಡಾ. ಜಯಕುಮಾರ ಸಿಂಧೆ, ಎನ್.ಎಸ್.ಎಸ್ ಅಧಿಕಾರಿ ಶಾಂತಕುಮಾರ ಪಾಟೀಲ್ ಹಾಗೂ ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು.

ಶಾಂತಿವರ್ಧಕ ಕಾಲೇಜಿಗೆ ಶೇ. 97.73 ಫಲಿತಾಂಶ: ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ

ಪಟ್ಟಣದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಸಂಚಾಲಿತ ಶಾಂತಿವರ್ಧಕ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿಪೂರ್ವ ಕಾಲೇಜು ಈ ಬಾರಿಯ ಪರೀಕ್ಷೆಯಲ್ಲಿ ಶೇ. 97.73 ರಷ್ಟು ಅತ್ಯುತ್ತಮ ಫಲಿತಾಂಶ ದಾಖಲಿಸುವ ಮೂಲಕ ಈ ಭಾಗದಲ್ಲಿ ಶೈಕ್ಷಣಿಕ ಸಾಧನೆ ಮಾಡಿದೆ.

ಫಲಿತಾಂಶದ ವಿವರ:

ಕಾಲೇಜಿನ ಒಟ್ಟು 193 ವಿದ್ಯಾರ್ಥಿಗಳ ಪೈಕಿ 176 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 23 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ (ಹಾಣುಟಿಛಿಣುಠಟಿ), 142 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 8 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಹಾಗೂ ಓರ್ವ ವಿದ್ಯಾರ್ಥಿ ತೇರ್ಗಡೆ ಹೊಂದುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ವಿಭಾಗವಾರು ಸಾಧಕರು:

ಕಲಾ ವಿಭಾಗ (ಶೇ. 97.14): ಅಲ್ಮಾಸ್ ಅಸ್ಲಂ (ಶೇ. 95.33), ಬುಶರಾ ಎಂಡಿ ರಫಿ (ಶೇ. 92) ಮತ್ತು ವರ್ಷಾ ನರಸಿಂಗ (ಶೇ. 86) ಸಾಧನೆ ಮಾಡಿದ್ದಾರೆ.

*ವಾಣಿಜ್ಯ ವಿಭಾಗ (ಶೇ. 97.3): ರೇಖಾ ಸಿದ್ದಲಿಂಗ (ಶೇ. 88.16), ಸ್ವಾತಿ ಬಸವರಾಜ (ಶೇ. 87.16) ಹಾಗೂ ನಿಲೇಶ ವಿಜಯಕುಮಾರ (ಶೇ. 83.33) ಉತ್ತಮ ಅಂಕ ಗಳಿಸಿದ್ದಾರೆ.

ವಿಜ್ಞಾನ ವಿಭಾಗ (ಶೇ. 98): ನಿಕೀತಾ ಸಂಜುಕುಮಾರ (ಶೇ. 95), ಅರುಣ ಶ್ರಾವಣ (ಶೇ. 91.03), ಬಿರಾದರ ಕೃಷ್ಣಾ (ಶೇ. 91.30), ಅನ್ನಪೂರ್ಣ (ಶೇ. 90.33) ಮತ್ತು ಭುವನೇಶ್ವರಿ ರಾಚಯ್ಯಾ (ಶೇ. 90)

ಸಾಧನೆಗೈದ ಪ್ರಮುಖರು:

ಗಣ್ಯರ ಅಭಿನಂದನೆ:

ವಿದ್ಯಾರ್ಥಿಗಳ ಈ ಗಮನಾರ್ಹ ಸಾಧನೆಗೆ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಈಶ್ವರ ಬಿ. ಖಂಡ್ರೆ, ಕಾರ್ಯದರ್ಶಿಗಳಾದ ಸಾಗರ ಖಂಡ್ರೆ, ಮುಖ್ಯ ಕಾರ್ಯ ವ್ಯವಸ್ಥಾಪಕ ಸುರೇಂದ್ರ ಆರ್., ಆಡಳಿತಾಧಿಕಾರಿ ಅಂಕುಶ ಡೋಲೆ, ಕಮಲಾ ಸಿರಸೆ ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ. ಕಾಲೇಜಿನ ಪ್ರಾಂಶುಪಾಲರಾದ ಶಿವಾಜಿ ಆರ್. ಹೆಚ್. ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಸಾಧಕ ವಿದ್ಯಾರ್ಥಿಗಳನ್ನು ಕಾಲೇಜಿನ ವತಿಯಿಂದ ಸನ್ಮಾನಿಸಿ, ಮುಂದಿನ ಭವಿಷ್ಯಕ್ಕೆ ಶುಭ ಹಾರೈಸಿದರು.

ಆರೋಗ್ಯ ಸಮತೋಲನಕ್ಕೆ ಕ್ರೀಡೆ ಪೂರಕ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಯುವಕರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಕ್ರೀಡೆಗಳು ಅತ್ಯಗತ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ–2026, ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಹಿರೇಮಠ ಸಂಸ್ಥಾನ ಮತ್ತು ಅಮೃತ ಮಹೋತ್ಸವ ಸಮಿತಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರಮಟ್ಟದ ಆಮಂತ್ರಿತ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಆಧುನಿಕ ಪ್ರಭಾವಕ್ಕೆ ಸಿಲುಕಿ ಯುವಕರು ತಮ್ಮ ಅಮೂಲ್ಯ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ದೇಶದಲ್ಲಿ ಶೇ.30ರಷ್ಟು ಯುವಕರು ದುಶ್ಚಟ ದುರ್ಗುಣಗಳ ದಾಸರಾಗುತ್ತಿದ್ದಾರೆ. ಇನ್ನೂ ಶೇ.30ರಷ್ಟು ಯುವಶಕ್ತಿ ಅತಿಯಾದ ಮೊಬೈಲ್, ಅಂತರ್ಜಾಲ ಬಳಕೆಯಿಂದ ದೈಹಿಕ ಮತ್ತು ಮಾನಸಿಕವಾಗಿ ದುರ್ಬಲರಾಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಇವುಗಳಿಂದ ಹೊರ ಬರಲು ಕ್ರೀಡೆಗಳು ಪೂರಕವಾಗಿವೆ. ಯುವಕರು ಹೆಚ್ಚು ಸಮಯ ಕ್ರೀಡೆಯಲ್ಲಿ ತೊಡಗಿಸಿಕೊಂಡು ತಮ್ಮ ಆರೋಗ್ಯ ಸುಧಾರಣೆ ಜತೆಗೆ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮೆರೆಯಬೇಕು ಎಂದು ತಿಳಿಸಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ವಾಲಿಬಾಲ್ ಪಂದ್ಯಾವಳಿಯಲ್ಲಿ ನಿರ್ಣಾಯಕರು ಪಾರದರ್ಶಕವಾಗಿ ನಿರ್ಣಯ ನೀಡಿ ಕ್ರೀಡಾ ಸ್ಫೂರ್ತಿ ತೋರಬೇಕು ಎಂದು ತಿಳಿಸಿದರು.

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ನೇತೃತ್ವ ವಹಿಸಿ ಮಾತನಾಡಿದರು. ವಾಲಿಬಾಲ್ ಪಂದ್ಯಾವಳಿ ಸಮಿತಿ ಉಪಾಧ್ಯಕ್ಷ ಸತ್ಯವಾನ ವೈರಾಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ವಾಲಿಬಾಲ್ ಪಂದ್ಯಾವಳಿ ಸಮಿತಿ ಅಧ್ಯಕ್ಷ ವಿಲಾಸ ಬಕ್ಕಾ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಡಾ.ಚನ್ನಬಸವ ಪಟ್ಟದ್ದೇವರು ಬ್ಯಾಂಕ್‌ನ ಅಧ್ಯಕ್ಷ ಡಿ.ಕೆ.ಸಿದ್ರಾಮ, ತುಮಕೂರು ಸಿಂಡಿ–ಕೇಟ್ ಸದಸ್ಯ ಬಸವರಾಜ ಕನ್ನಾಳೆ, ವಿದ್ಯಾಭಾರತಿ ಪಬ್ಲಿಕ್ ಶಾಲೆಯ ಅಧ್ಯಕ್ಷ ರೋಹಿತ ವೈರಾಗೆ, ಡಾ.ವಸಂತ ಪವಾರ, ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿ ಕೋಶಾಧ್ಯಕ್ಷ ಗಣಪತಿ ಬಾವುಗೆ, ಪ್ರಧಾನ ಕಾರ್ಯದರ್ಶಿ ರಂಗರಾವ ಜಾಧವ ಸೇರಿದಂತೆ ಹಲವರು ಇದ್ದರು. ವಾಲಿಬಾಲ್ ಪಂದ್ಯಾವಳಿ ಕೋ–ಆಡಿನೇಟರ್ ಅಶ್ವಿನ ಭೋಸ್ಲೆ ಸ್ವಾಗತಿಸಿದರು. ದೀಪಕ ಠಮಕೆ ನಿರೂಪಿಸಿ, ವಂದಿಸಿದರು.

ಭಾಲ್ಕಿ ಕೀರ್ತಿ ರಾಜ್ಯಮಟ್ಟಕ್ಕೆ

> ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಗಡಿ ಜಿಲ್ಲೆ ಬೀದರ್‌ಗೆ ಟಾಪರ್ ಸ್ಥಾನ ಪಡೆದ ಸಾಕ್ಷಿ ಹಣಮಂತ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸನ್ಮಾನಿಸಿ, ಅಭಿನಂದಿಸಿದರು. ನಂತರ ಮಾತನಾಡಿದ ಅವರು ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರತಿವರ್ಷ ಉತ್ತಮ ಸಾಧನೆ ತೋರುವ ಮೂಲಕ ಭಾಲ್ಕಿ ತಾಲೂಕಿನ ಕೀರ್ತಿ ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು. ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ ಇದ್ದರು.

> ಡಾ.ಬಸವಲಿಂಗ ಪಟ್ಟದ್ದೇವರು ಅವರು ಬಸವಾದಿ ಶರಣರ ವಿಚಾರಧಾರೆ ಮೈಗೂಡಿಸಿಕೊಂಡು ಈ ಭಾಗದಲ್ಲಿ ಧರ್ಮ ಪ್ರಸಾರದ ಜತೆಗೆ ಸಾಮಾಜಿಕ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.
>
> **ಈಶ್ವರ ಖಂಡ್ರೆ ಅಧ್ಯಕ್ಷರು ಅಮೃತ ಮಹೋತ್ಸವ ಸ್ವಾಗತ ಸಮಿತಿ ಭಾಲ್ಕಿ**

> ಕಲೆ, ಸಾಹಿತ್ಯ ಮತ್ತು ಕ್ರೀಡೆಯ ಬಗ್ಗೆ ಡಾ.ಬಸವಲಿಂಗ ಪಟ್ಟದ್ದೇವರಿಗೆ ಅಪಾರ ಗೌರವ ಹೊಂದಿದ್ದಾರೆ. ಹಾಗಾಗಿ ಅವರ ಅಮೃತ ಮಹೋತ್ಸವ ಸವಿನೆನಪಿಗಾಗಿ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿ ಏರ್ಪಡಿಸಲಾಗಿದೆ.
>
> **ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

ಭಾಲ್ಕಿ: ಏ.22 ಕ್ಕೆ ಅಮೃತ ಮಹೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನ ಮತ್ತು ಅಮೃತ ಮಹೋತ್ಸವ ಸಮಿತಿ ವತಿಯಿಂದ ಏ.22 ರಂದು ನಡೆಯಲಿರುವ ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭಕ್ಕೆ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಹ್ವಾನಿಸಲಾಗಿದೆ.

ನವದೆಹಲಿಯ ಉಪರಾಷ್ಟ್ರಪತಿಗಳ ಭವನಕ್ಕೆ ಈಚೆಗೆ ಸಂಸದ ಸಾಗರ ಖಂಡ್ರೆ ನೇತೃತ್ವದಲ್ಲಿ ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಭೇಟಿ ನೀಡಿ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ವಿಶ್ವಗುರು ಬಸವಣ್ಣನವರ ಪುಸ್ತಕ ನೀಡಿ ಐತಿಹಾಸಿಕ ಸಮಾರಂಭಕ್ಕೆ ಆಹ್ವಾನ ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷ ಶಶಿಧರ ಕೋಸಂಬೆ ಜತೆಗಿದ್ದರು.

> ಗಡಿಭಾಗದಲ್ಲಿ ಹಿರೇಮಠ ಸಂಸ್ಥಾನ ನೀಡುತ್ತಿರುವ ಜನಪರ ಮತ್ತು ಜೀವಪರ ಸೇವೆಯನ್ನು ಉಪ ರಾಷ್ಟ್ರಪತಿಗಳ ಗಮನಕ್ಕೆ ತರಲಾಗಿದ್ದು ಅವರು ಇದೇ 22 ರಂದು ನಡೆಯಲಿರುವ ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಅತ್ಯಂತ ಖುಷಿಯಿಂದ ಒಪ್ಪಿಗೆ ನೀಡಿದ್ದಾರೆ.
>
> **ಸಾಗರ ಖಂಡ್ರೆ ಸಂಸದರು ಬೀದರ್**

ಖರ್ಗೆಗೆ ಆಹ್ವಾನ :

ಅಖಿಲ ಭಾರತ ಕಾಂಗ್ರೆಸ್ ಸಮಿತಿ(ಎಐಸಿಸಿ) ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಖರ್ಗೆ ಅವರನ್ನು ಅವರ ಬೆಂಗಳೂರಿನ ನಿವಾಸಕ್ಕೆ ಶನಿವಾರ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಭೇಟಿ ನೀಡಿ ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭಕ್ಕೆ ಆಹ್ವಾನ ನೀಡಿದರು. ಶಶಿಧರ ಕೋಸಂಬೆ ಜತೆಗಿದ್ದರು.

ತರಕಾರಿ ಮಾರುವವರ ಮಗನ ಉತ್ತಮ ಸಾಧನೆ



• ಮಲ್ಲಮ್ಮ ನುಡಿವಾರ್ತೆ, ಕುಕನೂರ

ತಾಲೂಕಿನ ಕಕ್ಕಿಹಳ್ಳಿ ತಾಂಡಾದ ತರಕಾರಿ ಮಾರಾಟ ಮಾಡುವ ಬಡ ಕುಟುಂಬದಲ್ಲಿ ಜನಿಸಿದ ಶಶಿಕುಮಾರ ಈರಪ್ಪ ಕಾರಭಾರಿ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಶೇಕಡ 91.16 ಅಂಕ ಪಡೆದು ತೇರ್ಗಡೆಯಾಗಿದ್ದಾನೆ. ದಿನನಿತ್ಯ ಹೊಟ್ಟೆಪಾಡಿಗಾಗಿ ತರಕಾರಿ ಮಾರುವ ಕಕ್ಕಿಹಳ್ಳಿ ತಾಂಡಾದ ಈರಪ್ಪ ಮತ್ತು ರೇಣಮ್ಮ ಕಾರಭಾರಿ ಇವರ ದ್ವಿತೀಯ ಸುಪುತ್ರ ಶಶಿಕುಮಾರ ಚಿಕ್ಕಂದಿನಿಂದಲೂ ಓದಿನಲ್ಲಿ ಹಾಗೂ ಆಟೋಟದಲ್ಲಿ ಸದಾ ಮುಂದು. ಮನೆಯಲ್ಲಿ ಕಿತ್ತು ತಿನ್ನುವ ಬಡತನ ಇದ್ದರೂ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಇತರರಿಗೆ ಮಾದರಿಯಾಗಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಸರಕಾರಿ ಶಾಲೆ ಕಕ್ಕಿಹಳ್ಳಿಯಲ್ಲಿ ಪ್ರೌಢ ಶಿಕ್ಷಣವನ್ನು ಕುಕನೂರಿನ ಶ್ರೀ ಗವಿಸಿದ್ದೇಶ್ವರ ಪ್ರೌಢ ಶಾಲೆಯಲ್ಲಿ ಪಿಯುಸಿ ಶಿಕ್ಷಣವನ್ನು ಬೇಂದ್ರೆ ಕಾಲೇಜು ಧಾರವಾಡದಲ್ಲಿ ಪೂರೈಸಿರುವ ಶಶಿಕುಮಾರ ಬಡತನದಲ್ಲಿ ಅರಳಿದ ಪ್ರತಿಭೆ. ಮುಂದೆ ನೀಟ್ ನಲ್ಲಿ ಅತ್ಯತ್ತಮ ಸಾಧನೆ ಮಾಡಿ ಎಂ. ಬಿ. ಬಿ. ಎಸ್ ಓದಿ ಒಳ್ಳೆಯ ವೈದ್ಯನಾಗಿ ಬಡವರ ಸೇವೆ ಮಾಡುವ ಆಸೆ ಇಟ್ಟಿರುವ ವಿದ್ಯಾರ್ಥಿಗೆ ಕಕ್ಕಿಹಳ್ಳಿ ಗ್ರಾಮದ ಗುರು ಹಿರಿಯರು ಸನ್ಮಾನ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಮಾತನಾಡಿ ಬಡತನವನ್ನು ಮೆಟ್ಟಿ ಸಾಧನೆ ಮಾಡಿದ ಶಶಿಕುಮಾರ ನಮ್ಮ ಬಂಜಾರ ಸಮುದಾಯಕ್ಕೆ ಕೀರ್ತಿ ತಂದಿದ್ದಾರೆ, ಎಲ್ಲಾ ವಿದ್ಯಾರ್ಥಿಗಳು ಈ ವಿದ್ಯಾರ್ಥಿಯನ್ನು ಮಾದರಿಯನ್ನಾಗಿ ತೆಗೆದುಕೊಂಡು ನೀವು ಕೂಡ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಭವಿಷ್ಯ ರೂಪಿಸಿಕೊಳ್ಳಬೇಕು. ಕ್ರೀಡೆ ಮತ್ತು ವಿದ್ಯಾಭ್ಯಾಸದಲ್ಲಿ ಏಕ ಕಾಲಕ್ಕೆ ಸಾಧನೆ ಮಾಡಿದ್ದು ವಿಶೇಷ, ರಾಜ್ಯ ಮಟ್ಟದಲ್ಲಿ ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ ಪಡೆದ ಶಶಿಕುಮಾರ ಕನ್ನಡ ಮಾಧ್ಯಮದಲ್ಲಿ ಓದಿ, ವಿಜ್ಞಾನದಲ್ಲಿ ಹೆಚ್ಚು ಅಂಕ ಪಡೆದಿದ್ದು ಆ ವಿದ್ಯಾರ್ಥಿಯ ಸಾಧನೆ ನಿಜಕ್ಕೂ ಶ್ಲಾಘನೀಯ, ತಮ್ಮ ಬಡತನದ ಕಷ್ಟ ಮಕ್ಕಳು ಅನುಭವಿಸಬಾರದೆಂದು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿದ ಪಾಲಕರ ಶ್ರಮಕ್ಕೆ ಅವರ ಮಕ್ಕಳು ಈ ರೀತಿ ಅಂಕ ಪಡೆಯುವ ಮೂಲಕ ಅವರ ಗೌರವ ಹೆಚ್ಚುವಂತಾಗಿದೆ. ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳನ್ನು ಯಾವುದೇ ಕಾರಣಕ್ಕೂ ಶಿಕ್ಷಣದಿಂದ ವಂಚಿತರನ್ನಾಗಿ ಮಾಡದೆ ಉನ್ನತ ಶಿಕ್ಷಣ ಕೊಡಿಸಿದರೆ ನಮ್ಮ ಮಕ್ಕಳು ಸಾಧನೆ ಮಾಡೇ ಮಾಡುತ್ತಾರೆ, ನಮ್ಮ ಎಲ್ಲಾ ಮಕ್ಕಳಲ್ಲಿ ಒಂದಿಲ್ಲೊಂದು ಪ್ರತಿಭೆ ಇರುತ್ತದೆ, ಅದನ್ನು ಹೊರಗೆ ತರಲು ನಾವು ಪ್ರೇರೇಪಿಸಬೇಕು. ಶಶಿಕುಮಾರನ ಮುಂದಿನ ವಿದ್ಯಾಭ್ಯಾಸಕ್ಕೆ ಏನೇ ಸಹಾಯ ಸಹಕಾರ ಬೇಕಿದ್ದರೂ ನಮ್ಮ ತಾಂಡಾದ ಗುರು ಹಿರಿಯರು ಸದಾ ಕಾಲ ಕೊಡುತ್ತಾರೆ ಎಂದರು.

ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

ಪತ್ರಕರ್ತರು ಪತ್ರಿಕೆಯ ಮಾಲಿಕರು ಪ್ರಜಾಪ್ರಭುತ್ವದ ನಾಲ್ಕನೇ ಸ್ಥಂಭ

ಪತ್ರಕರ್ತರು ಮತ್ತು ಪತ್ರಿಕೆಯ ಮಾಲಿಕರು ಪ್ರಜಾಪ್ರಭುತ್ವದ ನಾಲ್ಕನೇ ಸ್ಥಂಭವಾಗಿದ್ದು, ಸಮಾಜದ ಧ್ವನಿಯನ್ನು ಜನರ ಮುಂದೆ ತರುವ ಮಹತ್ತರ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾಧ್ಯಮ ಕ್ಷೇತ್ರವು ಅನೇಕ ಆರ್ಥಿಕ ಹಾಗೂ ವೃತ್ತಿಪರ ಸವಾಲುಗಳನ್ನು ಎದುರಿಸುತ್ತಿದೆ. ಸಣ್ಣ ಹಾಗೂ ಮಧ್ಯಮ ಪತ್ರಿಕೆಗಳು ನಿರ್ವಹಣೆಯಲ್ಲಿ ಕಷ್ಟ ಅನುಭವಿಸುತ್ತಿದ್ದು, ಪತ್ರಕರ್ತರು ತಮ್ಮ ಜೀವಪಣವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.


ಈ ಹಿನ್ನೆಲೆಯಲ್ಲಿ ಸರ್ಕಾರವು ಪತ್ರಕರ್ತರ ಹಾಗೂ ಪತ್ರಿಕೆ–ಯ ಮಾಲಿಕರ ನೆರವಿಗೆ ಮುಂದಾಗುವುದು ಅತ್ಯವಶ್ಯಕವಾಗಿದೆ. ಪತ್ರಕರ್ತರಿಗೆ ಭದ್ರತಾ ಯೋಜನೆ, ಆರೋಗ್ಯ ವಿಮೆ, ನಿವೃತ್ತಿ ಸೌಲಭ್ಯಗಳನ್ನು ಒದಗಿಸಬೇಕು. ಜೊತೆಗೆ ಪತ್ರಿಕಾ ಸಂಸ್ಥೆಗಳಿಗೆ ಆರ್ಥಿಕ ನೆರವು, ಜಾಹೀ

ಪಿಯು ಪರೀಕ್ಷೆಯಲ್ಲಿ ಶೇ.97 ರಷ್ಟು ಫಲಿತಾಂಶ
ಬಾದನಹಟ್ಟಿ ಗ್ರಾಮಕ್ಕೆ ಕೀರ್ತಿತಂದ ಮಣಿಕಂಠ , ಭೀಮಣ್ಣ

ಮಲ್ಲಮ್ಮ ನುಡಿ ವಾರ್ತೆ
ಕುರುಗೋಡು

ಸಮೀಪದ ಬಾದನಹಟ್ಟಿ ಗ್ರಾಮದ ಬಟ್ರಳ್ಳಿಸಣ್ಣಮಲ್ಲಪ್ಪನ ಮಗ ಬಿ.ಮಣಿಕಂಠ ಎಂಬ ಗ್ರಾಮೀಣ ಪ್ರತಿಭೆ ಪಿಯು ಪರೀ–ಕ್ಷೆಯ ಫಲಿತಾಂಶದಲ್ಲಿ ಶೇ.97 ರಷ್ಟು ಉತ್ತಮ ಸಾಧನೆ ಮಾಡಿ ಬಾದನಹಟ್ಟಿ ಗ್ರಾಮಕ್ಕೆ ಕೀರ್ತಿ ತಂದಿದ್ದಾನೆ ಎಂದು ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.

ಹೌದು .. ಇಂಥಹ ಗ್ರಾಮೀಣ ಪ್ರದೇಶದ ಬಡಕುಟುಂಬದಲ್ಲಿ ಹುಟ್ಟಿ ಕೊಟ್ಟೂರಿನ ಪಿಯು ಇಂದು ಕಾಲೇಜಿನಲ್ಲಿ ಪಿಯು ತರಗತಿಯಲ್ಲಿವ್ಯಾಸಾಂಗಮಾಡಿದ



ಬಿ.ಮಣಿಕಂಠ ಅವರು ಹಗಲು–ಇರುಳು ಲೆಕ್ಕಿಸದೇ ವರ್ಷಪೂರ್ತಿ ಪಿಯು ತರಗತಿಯಲ್ಲಿ ಉತ್ತಮ ವಿದ್ಯಾಭ್ಯಾಸ ಮಾಡಿ ಪಿಯು ಫಲಿತಾಂಶದಲ್ಲಿ ಶೇ.97 ರಷ್ಟು ಫಲಿತಾಂಶ ಪಡೆದು ಕುರುಗೋಡು ತಾಲೂಕಿನಲ್ಲಿಪ್ರಥಮಸ್ಥಾನಪಡೆದು ತಂದೆ–ತಾಯಿಯಂದಿರಿಗೆ ಸೈ ಎನಿಸಿಕೊಂಡು ಉತ್ತಮ ಸಾಧನೆ ಮಾಡಿರುವುದು ನಿಜಕ್ಕೂಹೆಮ್ಮೆಯ ಸಂಗತಿ ಎಂದು ಗ್ರಾಮದ ಯುವಮುಖಂಡ ಪಿ.ಗಾದಿಲಿಂಗ ನುಡಿದ್ದಾರೆ.


ಸಿಹಿಹಂಚಿ ಸಂಭ್ರಮಿಸಿದ ಪೋಷಕರು.

ಬಾದನಹಟ್ಟಿ ಗ್ರಾಮದ ಬಡಕುಟುಂಬದಿಂದ ಬಂದ ಬಿ.ಮಣಿಕಂಠ ಎಂಬ ವಿದ್ಯಾರ್ಥಿ ಕೊಟ್ಟೂರುಇಂದುಪಿಯುಕಾಲೇಜಿನಲ್ಲಿ ಕಲಾವಿಭಾಗದಲ್ಲಿ[ಅರ್ಟ್ಸ್]600ಕ್ಕೆ 584 ಅಂಕಪಡೆದು ಉತ್ತಮ ಸಾಧನೆ ಮಾಡಿದ ಹಿನ್ನಲೆಯಲ್ಲಿ ತಂದೆಬಟ್ರಳ್ಳಿಸಣ್ಣಮಲ್ಲಪ್ಪ,ತಾಯಿ ಬಟ್ರಳ್ಳಿನಾಗಮ್ಮ ಹಾಗು ಗ್ರಾಮದ ಹಿತೈಷಿಗಳು ಬಿ.ಮಣಿಕಂಠ ಎಂಬ ವಿದ್ಯಾರ್ಥಿಗೆ ಸಿಹಿಹಂಚಿ ಸಂಭ್ರಮಿಸಿದರು.

ಗ್ರಾಮಸ್ಥರಹಾರೈಕೆ ;

ಬಾದನಹಟ್ಟಿ ಗ್ರಾಮದ ಬಡಕುಟುಂಬದಲ್ಲಿ ಹುಟ್ಟಿಬಂದ ಯುವಪ್ರತಿಭೆಬಿ.ಮಣಿಕಂಠಅವರು ಪಿಯು ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಪಡೆದು ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ.ಆದ್ದರಿಂದಮುಂದೆಈ ವಿದ್ಯಾರ್ಥಿಇನ್ನುಉನ್ನತಶಿಕ್ಷಣಪಡೆದು ಶಿಕ್ಷಣಕ್ಷೇತ್ರದಲ್ಲಿಅತಿಹೆಚ್ಚುಅಂಕಪಡೆದು ರಾಜ್ಯಸರ್ಕಾರದಲ್ಲಿಉನ್ನತಹುದ್ದೆ ಪಡೆಯಲಿಎಂದುಬಾದನಹಟ್ಟಿಗ್ರಾಮದ ರೈತಮುಖಂಡಮೇಟಿಆಗಲೂರಪ್ಪ, ಪಿ.ಗಾದಿಲಿಂಗ,ಬಿ.ಮಲ್ಲಪ್ಪ,ಎಂ.ಶಿವಪ್ಪ, ಮೇಟಿಜಗದೀಶ, ಎ.ಗಂಗಣ್ಣ, ದುರ್ಗಾಅಂಜಿನಿ, ಬಿ.ಈರೇಶ, ಬಿ.ತಿಮ್ಮಪ್ಪ, ದುರ್ಗಾಕರಿಬಸಪ್ಪ ಸೇರಿದಂತೆ ಇತರೆ ಗ್ರಾಮಸ್ಥರು ಹಾರೈಸಿದ್ದಾರೆ.

ಮುದ್ದಾಪುರನ ತುಂಗಭದ್ರಾ ಕಾಲೇಜಿಗೆ ಉತ್ತಮ ಫಲಿತಾಂಶ



ಮಲ್ಲನ ನುಡಿ ವಾರ್ತೆ ಮಸ್ಕಿ


ತಾಲ್ಲೂಕಿನ ಮುದ್ದಾಪುರನ ತುಂಗಭದ್ರಾ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 2025–26 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಗೈದಿದ್ದಾರೆ ವಾಣಿಜ್ಯ ವಿಭಾಗದಲ್ಲಿ ಕಾಲೇಜಿಗೆ ಪ್ರಥಮ ತಸ್ಲಿಂ ತಂದೆ ಹುಸೇನಸಾಬ 543(90.5%) ಹಾಗೂ ಯಲ್ಲಮ್ಮ ತಂದೆ ಅಮರೇಶ 503(83.83%) ಅಂಕಗಳನ್ನು ಪಡೆದುಕೊಂಡಿದ್ದಾರೆ ಅದೇ ರೀತಿ ಕಲಾ ವಿಭಾಗದಲ್ಲಿ ಕಾಲೇಜಿಗೆ ಪ್ರಥಮ ದೀಪಾ ತಂದೆ ಹನುಮಂತ 499(83.16%) ಅಂಕಗಳನ್ನು ಪಡೆದಿದ್ದಾಳೆ.ವಿದ್ಯಾರ್ಥಿಗಳು ಉನ್ನತ ಶ್ರೇಣಿ– 01,ಪ್ರಥಮ ದರ್ಜೆ–22, ದ್ವಿತೀಯ–3 ಸೇರಿದಂತೆ ಕಾಲೇಜಿನ ಒಟ್ಟು (71.11%) ಫಲಿತಾಂಶ ಬಂದಿದೆ ಎಂದು ಕಾಲೇಜು ಪ್ರಾಚಾರ್ಯ ಲಕ್ಷ್ಮಣ ಕರ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆ ಅಧ್ಯಕ್ಷರಾದ ಮಹದೇವಪ್ಪ ಗೌಡ ಪೊಲೀಸ್ ಪಾಟೀಲ್. ಕಾರ್ಯದರ್ಶಿ ರಾಮಣ್ಣ ನಾಯಕ, ಉಪನ್ಯಾಸಕರು,ಪಾಲಕರು ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ತೋಂಟದಾರ್ಯ ಕಾಲೇಜು
ವಿದ್ಯಾರ್ಥಿಗಳ ಅಭೂತಪೂರ್ವ ಸಾಧನೆ

ಮಲ್ಲಮ್ಮ ನುಡಿ ವಾರ್ತೆ
ಕಲ್ಲುರ್ಗಿ

ಪ್ರತಿಷ್ಠಿತ ಜಗದ್ಗುರು ತೆ–ೋಂಟದಾರ್ಯ ವಿದ್ಯಾಪೀಠದ ರಾಜ್ಯದ ವಿವಿಧ ಭಾಗಗಳಲ್ಲಿರುವ ಪದವಿ ಪೂರ್ವ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳಿಗೆ ಅತ್ಯುತ್ತಮ ಫಲಿತಾಂಶ ಬಂದಿದೆ. ಹಿರೇಮಲ್ಲೂರ ಈಶ್ವರನ್ ಪದವಿ ಪೂರ್ವ ಕಾಲೇಜ ಧಾರವಾಡ ವಿಜ್ಞಾನ ವಿಭಾಗದಲ್ಲಿ ಪ್ರತಿಶತ (88.07)% ವಾಣಿಜ್ಯ ವಿಭಾಗದಲ್ಲಿ (83.33)% ಪಡೆದುಕೊಂಡಿದೆ.

ತೋಂಟದ ಸಿದ್ದೇಶ್ವರ ಪ.ಪೂ ಕಾಲೇಜಗದಗ,ವಿಜ್ಞಾನ ವಿಭಾಗದಲ್ಲಿ (91.04)% ವಾಣಿಜ್ಯ ವಿಭಾಗದಲ್ಲಿ (100)%, ಕಲಾ ವಿಭಾಗದಲ್ಲಿ (77.27)% ಫಲಿತಾಂಶ ಬಂದಿದೆ. ತೋಂಟದಾರ್ಯ ಪ.ಪೂ ಕಾಲೇಜ ಗಜೇಂದ್ರಗಡ ವಿಜ್ಞಾನ ವಿಭಾಗದಲ್ಲಿ 80%,ವಾಣಿಜ್ಯ ವಿಭಾಗದಲ್ಲಿ(85.71)% ಉತ್ತಮ ಫಲಿತಾಂಶ ನೀಡಿದೆ.



ಶ್ರೀಮತಿ ನಿಂಗಮ್ಮ ಹೂಗಾರ ಪ.ಪೂ ಕಾಲೇಜ ಅಣ್ಣಿಗೇರಿ ವಿಜ್ಞಾನ ವಿಭಾಗದಲ್ಲಿ ಕಲಾ ವಿಭಾಗದಲ್ಲಿ (85.71)% ಪಡೆದುಕೊಂಡಿದೆ. ವಾಣಿಜ್ಯ ವಿಭಾಗದಲ್ಲಿ (94.44)% ಅತ್ಯುತ್ತಮ ಫಲಿತಾಂಶ ಬಂದಿದೆ. ಸಿ.ಎಮ್.ಎನ್ ಪ.ಪೂ ಕಾಲೇಜ ಕಾರಟಗಿ ಕಲಾ ವಿಭಾಗದಲ್ಲಿ , ವಾಣಿಜ್ಯ ವಿಭಾಗದಲ್ಲಿ ಮಹೋನ್ನತ ಸಾಧನೆ ಮಾಡಿದೆ. ಎಮ್. ಎಚ್.ಎಮ್ ಪ.ಪೂ ಕಾಲೇಜ ಆಲಮಟ್ಟಿ ಕಲಾ ವಿಭಾಗದಲ್ಲಿ (98)%, ವಾಣಿಜ್ಯ ವಿಭಾಗದಲ್ಲಿ (96.77)% ಅಭೂತಪೂರ್ವ ಸಾಧನೆ ಮಾಡಿದೆ.

ಜಗದ್ಗುರು ತೋಂಟದಾರ್ಯ ಪ.ಪೂ ಕಾಲೇಜ, ಡಂಬಳ ಕಲಾ ವಿಭಾಗದಲ್ಲಿ(85.29)%ಪಡೆದು–ಕೊಂಡು ಮುದ್ರಣ ನಗರಿಯಲ್ಲಿ ಹೆಸರುವಾಸಿಯಾಗಿದೆ.

ಸಂಸ್ಥೆಯಅಧ್ಯಕ್ಷರಾದಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ ಶುಭಾಶಯ ಕೋರಿದ್ದಾರೆ.

ತೋಂಟದಾರ್ಯ ಪಿಯು ವಿದ್ಯಾರ್ಥಿಗಳ ಸಾಧನೆ ಅತೀವ ಸಂತಸ ಉಂಟು ಮಾಡಿದೆ. ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನ ಉಜ್ವಲವಾಗಲಿ ಎಂದು ಸೇವಾಭೂಷಣ, ಖ್ಯಾತ ಶಿಕ್ಷಣ ತಜ್ಞರು ಹಾಗೂ ಜಗದ್ಗುರು ತೆ–ೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್ ಎಸ್. ಪಟ್ಟಣ್ ಶೆಟ್ಟರ್ ಶುಭ ಹಾರೈಸಿದ್ದಾರೆ.

ಮಾನವ ಜನತೆಗೆ ಸಂಸ್ಕಾರ ಮುಖ್ಯ : ಶ್ರೀಶೈಲ ಜಗದ್ಗುರು


ಮಲ್ಲನ ನುಡಿ ವಾರ್ತೆ ಕಲಘಟಗಿ

.ಪ್ರತಿಯೊಂದು ಜೀವಿಗೂ ತನ್ನದೇ ಆದ ಸಂಸ್ಕಾರವಿದೆ ಅದರಲ್ಲಿ ಜ್ಞಾನವುಳ್ಳ ಮನುಷ್ಯನಿಗೆ ಇಂದಿನ ದಿನಮಾನಗಳಲ್ಲಿ ಸಂಸ್ಕಾರದ ಅರಿವಿಲ್ಲದೆ ಪ್ರಾಣಿಗಿಂತ ಕಡೆಯದಾಗಿ ವರ್ತಿಸುತ್ತಿರುವ ಜೀವಕ್ಕೆ ಸಂಸ್ಕಾರ ಬಹಳ ಮುಖ್ಯವಾಗಿದೆ ಎಂದು ಶ್ರೀಶೈಲ ಪೀಠದ ಜಗದ್ಗುರುಗಳಾದ ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿದರು.

ಅವರು ತಾಲೂಕಿನ ಗಂಬ್ಯಾಪೂರ ಗ್ರಾಮದಲ್ಲಿ ಶ್ರೀಗ್ರಾಮದೇವಿ ಜಾತ್ರಾಮಹೋತ್ಸವದಲ್ಲಿಮಾತನಾಡಿ ಸಂಸ್ಕಾರದಿಂದ ಮನುಷ್ಯನಿಗೆ ಉತ್ತಮ ಗುಣಗಳು ಪ್ರಾಪ್ತವಾಗುತ್ತವೆ ಅವುಗಳು ಇಂತಹ ದೇವಿ ಧರ್ಶನದಿಂದ ಮಾತ್ರ ಸಾಧ್ಯ ಎಂದರು.

ಹೆನ್ನೆರಡು ಮಠದ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಾತನಾಡಿದರು.

ಇ ಸಂಧರ್ಬದಲ್ಲಿ ಸಿ.ಐ ಬಾಬಜಿ,ಶಂಕರಣ್ಣ ರಾಯನಾಳ,ಮಂಜುಚಿಕ್ಕಮಠ,ಪಟದಯ್ಯಚಿಕ್ಕಮಠ,ಗುರು ಬೇಂಗೆರಿ,ಗೂಳಪ್ಪಪಾಟೀಲ,ಗಂಗಯ್ಯಚಿಕ್ಕಮಠ,ರಾಜು ತಡಸದ,ಉಳವಪ್ಪ ಗಾಣಿಗೇರ,ಚನ್ನಬಸಯ್ಯ ಚಿಕ್ಕಮಠ,ನಾಗಪ್ಪ ಗುಡ್ಡದಕೇರಿ ಜಾತ್ರಾ ಕಮಿಟಿ ಸದಸ್ಯರು ಗ್ರಾಮಸ್ಥರು ಇದ್ದರು.



ಕಲಘಟಗಿ ತಾಲೂಕಿನ ಗಂಬ್ಯಾಪೂರ ಗ್ರಾಮದಲ್ಲಿ ಶ್ರೀಶೈಲ ಪೀಠದ ಜಗದ್ಗುರುಗಳಾದ ಡಾ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಗ್ರಾಮದೇವಿ ಧರ್ಶನ ಪಡೆದರು.

ಸ್ಫೂರ್ತಿ ಧಾಮದ ಮಕ್ಕಳಿಗೆ ಸಂಜೀವಿನಿ ಯಾದ ಮಸ್ಕಿ ಪುರಸಭೆ ಸಿಬ್ಬಂದಿ ವರ್ಗ



ಮಲ್ಲನ ನುಡಿ ವಾರ್ತೆ ಮಸ್ಕಿ :

ಪಟ್ಟಣದ ವರವಲಯದಲ್ಲಿರುವ ಅಭಿನಂದನ್ ಸ್ಫೂರ್ತಿ ಧಾಮದಲ್ಲಿ ಅಳವಡಿಸಲಾಗಿದ್ದ ನೀರಿನ ಬೋರ್ವೆಲ್ ವಿದ್ಯುತ್ ಹಸ್ತವ್ಯಸ್ತದಿಂದ ಎರಡು ನೀರಿನ ಮೋಟರ್ ಸ್ಥಗಿತಗೊಂಡಿರುವುದರಿಂದ . ಸ್ಥಳೀಯ ಪುರಸಭೆಯ ಸಿಬ್ಬಂದಿ ವರ್ಗದವರಾದ ರವಿಕುಮಾರ್ ಅವರು ಮುತುವರ್ಜಿಯನ್ನು ವಹಿಸಿ ಸ್ಫೂರ್ತಿ ಧಾಮದ ಮಕ್ಕಳಿಗೆ ಉತ್ತಮ ಆರೋಗ್ಯದ ದೃಷ್ಟಿಯಿಂದ ಹೊಸ ಬೋರಲ್ ವ್ಯವಸ್ಥೆಯನ್ನು ಪುರಸಭೆಯಿಂದ ಕೈಗೊಳ್ಳಲಾಯಿತು.ಹಗಲು ಇರುಳು ಎನ್ನದೆ ಸ್ಫೂರ್ತಿ ಧಾಮದ ಮಕ್ಕಳ ಒಳಿತಿಗಾಗಿ ಶ್ರಮಿಸಿದ ಪುರಸಭೆಯ ಸಿಬ್ಬಂದಿ ಗಳಾದ ರವಿಕುಮಾರ್ ಶ್ರೀಶೈಲ ಶಿವರಾಜ್ ಮತ್ತು ಪುರಸಭೆ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಂಸ್ಥೆಯ ಮಕ್ಕಳು ಕೃತಜ್ಞತೆಗಳನ್ನು ಅರ್ಪಿಸಿದರು. ಈ ಸಂದರ್ಭದಲ್ಲಿ ಅಭಿನಂದನ್ ಸಂಸ್ಥೆಯ ಸಂಸ್ಥಾಪಕ ರಾಮಣ್ಣ ಹಂಪರಗುಂದಿ ಹಾಗೂ ಅಭಿನಂದನ್ ಸ್ಫೂರ್ತಿ ಧಾಮದ ಮಕ್ಕಳು ಉಪಸ್ಥಿತರಿದ್ದರು.

ಎ.14ರಂದು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ:

ತಾಲೂಕಾ ಆಡಳಿತ, ತಾಪಂ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆಯನ್ನು ಎ. 14ರಂದು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಬಸವ ಭವನದಲ್ಲಿ ಆಯೋಜಿಸಲಾಗಿದೆ.



ಅಂದು ಬೆಳಿಗ್ಗೆ 8 ಗಂಟೆಗೆ ಪಟ್ಟಣದ ಡಾ. ಬಿ ಆರ್ ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ಆರಂಭಿಸಿ, ಚನ್ನಬಸವ ನಗರ, ಗಣಪತಿ ವೃತ್ತ, ವಿರಕ್ತಮಠ, ದ್ಯಾಮವ್ವನ ಗುಡಿ, ಅಗಸಿ, ಶ್ರೀ ಬಸವೇಶ್ವರ ವೃತ್ತ, ಅಂಬೇಡ್ಕರ ನಗರ ಮೂಲಕ ಬಸವ ಭವನದಲ್ಲಿ ಸಮಾರಂಭ ಜರುಗುವುದು.

ಬಸವ ಭವನದಲ್ಲಿ ಡಾ. ರೂಪಾ ಎಸ್ ಜೋಗಳೇಕರ ಅವರಿಂದ ಉಪನ್ಯಾಸ ಹಾಗೂ ಸಂವಿಧಾನ ಪೀಠಿಕೆ ವಾಚನ ನಡೆಯಲಿದೆ.

ಸಮಾರಂಭದಲ್ಲಿ ಸಚಿವರು, ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು, ತಾಲೂಕಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಮೈಬೂಬ್ ನಾಯ್ಕೋಡಿ ಸೇರಿದಂತೆ ಅನೇಕರು ಭಾಗವಹಿಸುವರು ಎಂದು ತಾಲೂಕಾ ಮಟ್ಟದ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ವಾಯ್. ಎಸ್ ಸೋಮನಕಟ್ಟಿ ತಿಳಿಸಿದ್ದಾರೆ.

ಅಂಕೋಲೆಯಲ್ಲಿ ಏ. 12ಕ್ಕೆ ಸಂಜೆ ಬಂಡಿಹಬ್ಬ ಪುಸ್ತಕ ಬಿಡುಗಡೆ

ಅಂಕೋಲಾ:ನಾಡಿನಜನಪ್ರಿಯ ಹಬ್ಬಗಳಲ್ಲಿ ಒಂದಾಗಿರುವ ಬಂಡಿಹಬ್ಬ ಜಗತ್ತಿನ ಅತೀ ಪ್ರಾಚೀನ ಹಬ್ಬಗಳಲ್ಲಿಒಂದಾಗಿದೆ ಎಂಬುದನ್ನು ದಾಖಲೆಗಳ ಮೂಲಕ ನಿರೂಪಿಸಿರುವ ಕೃತಿ–ಕಾರ ವಿಘ್ನೇಶ್ವರ ಗುನಗಾ ಅವರ ಬಂಡಿಹಬ್ಬ ಪುಸ್ತಕ ಏಪ್ರಿಲ್ 12ರ ರವಿವಾರ ಸಂಜೆ 4 ಗಂಟೆಗೆ ಪಟ್ಟಣದ ಭೂಮ್ತಾಯಿ (ಶ್ರೀ ಶಾಂತಾದುರ್ಗಾ) ದೇವಸ್ಥಾನದ ಆವರಣದಲ್ಲಿ ವಿದ್ಯುಕ್ತವಾಗಿ ಲೋಕಾರ್ಪಣೆಗೊಳ್ಳಲಿದೆ ಎಂದು ರಾಜ್ಯಪ್ರಶಸ್ತಿ ಪುರಸ್ಕೃತ ನಾಟಿವೈದ್ಯ ಹನುಮಂತ ಗೌಡ ಅವರು ಹೇಳಿದರು.

ಅವರು ಪಟ್ಟಣದ ಹೋಟೇಲ್ ಗುರುಪ್ರಸಾದಲ್ಲಿಕರೆದಸುದ್ದಿಘೋಷ್ಠಿಯಲ್ಲಿ ಮಾತನಾಡಿ ಭಯ, ಭಕ್ತಿ ಮತ್ತು ರೋಮಾಂಚನಗಳ ರುದ್ರ ಸಂಗಮವಾಗಿರುವಬಂಡಿಹಬ್ಬದಲ್ಲಿ ಆಚರಣೆಗೊಳ್ಳುವವಿಧಿವಿಧಾನಗಳನ್ನು ಅಧ್ಯಯನ ನಡೆಸಿರುವ ಕೃತಿಕಾರ ವಿಘ್ನೇಶ್ವರ ಗುನಗಾ ಅವರ ಕಾರ್ಯ ಶ್ಲಾಘನೀಯವಾಗಿದೆ ಎಂದರು.



ಅಂಕೋಲಾದ ಗುರುಪ್ರಸಾದ ಹೋಟೇಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹನುಮಂತ ಗೌಡ ಅವರು ಬಂಡಿಹಬ್ಬ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಗದೀಶ ನಾಯಕ ಮಾತನಾಡಿ, ವಿಘ್ನೇಶ್ವರ ಗುನಗಾ ಅವರ ಎರಡನೆ ಕೃತಿಯಾಗಿರುವ ಬಂಡಿಹಬ್ಬ ಪುಸ್ತಕ ಇನ್ನೂ ಹೆಚ್ಚಿನ ಓದುಗರನ್ನು ಸೆರೆಹಿಡಿಯುವಲ್ಲಿ ಯಾವುದೇ ಸಂದೇಹವಿಲ್ಲ ಎಂದರು.

ಪತ್ರಕರ್ತರ ಸಂಘದ ಅಧ್ಯಕ್ಷ ರಾಘು ಕಾಕರಮಠ ಮಾತನಾಡಿ, ವಿಶಿಷ್ಟ ಅಧ್ಯಯನ ಹಾಗೂ ದಾಖಲೆಗಳ ಸಂಯೋಜನೆಯೊಂದಿಗೆ ನಿರೂಪಿಸುವ ವಿಘ್ನೇಶ್ವರ ಗುನಗಾ ಅವರ ಬಂಡಿಹಬ್ಬ ಕೃತಿ ನಾಡಿನ ಅತ್ಯುತ್ತಮ ಕೃತಿಗಳ ಸಾಲಿನಲ್ಲಿ ಸೇರ್ಪಡೆಗೊಳ್ಳಲಿದೆ ಎಂದರು.

ಲೇಖಕ ಮಹಾಂತೇಶ ರೇವಡಿ ಪ್ರಾಸ್ತಾವಿಕವಾಗಿ ಮಾತನಾಡಿ,ಬಂಡಿಹಬ್ಬ ಪುಸ್ತಕವನ್ನು ಕರಾವಳಿ ಮುಂಜಾವು ದಿನಪತ್ರಿಕೆ ವ್ಯವಸ್ಥಾಪಕ ಸಂಪಾದಕ ಗಂಗಾಧರ ಹೀರೆಗುತ್ತಿ ಅವರು ಲೋಕಾರ್ಪಣೆಗೊಳಿಸಲಿದ್ದಾರೆ. ಹಿರಿಯ ಸಾಹಿತಿ ಶಾಂತರಾಮ ನಾಯಕ ಹಿಚ್ಕಡ ಅವರು ಅಧ್ಯಕ್ಷತೆ ವಹಿಸಲಿದ್ದು, ನಿವೃತ್ತ ಉಪನ್ಯಾಸಕ ಪ್ರೊ. ಶ್ರೀಧರ ನಾಯಕ ಕೃತಿ ಪರಿಚಯಿಸಲಿದ್ದಾರೆ.

ಅತಿಥಿಗಳಾಗಿ ಹಿರಿಯ ಕಥೆಗಾರ ಡಾ.ಆರ್.ಜಿ.ಗುಂದಿ,ಪ್ರಾಚಾರ್ಯ ಡಾ.ಎಸ್.ವಿ.ವಸ್ತ್ರದ,ಗ್ರಾಮದೇವಿ ಶ್ರೀ ಶಾಂತಾದುರ್ಗಾ ದೇವಸ್ಥಾನ ಜೀರ್ಣೋದ್ಧಾರ ಮತ್ತು ಅಭಿವೃದ್ಧಿ ಸಮಿತಿ ಅಧ್ಯಕ್ಷ ಸುಭಾಷ ನಾರ್ವೇಕರ, ಪಹರೆ ವೇದಿಕೆ ಅಧ್ಯಕ್ಷ ನಾಗರಾಜ ನಾಯಕ, ಹೊಸ ದಿಗಂತ ದಿನಪತ್ರಿಕೆಯ ಹುಬ್ಬಳ್ಳಿ ಬ್ಯೂ–ರೋ ಮುಖ್ಯಸ್ಥ ವಿಠ್ಠಲದಾಸ ಕಾಮತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಕೃತಿಕಾರ ವಿಘ್ನೇಶ್ವರ ಗುನಗಾ ಹಾಗೂ ಫಿಟ್ನೆಸ್ ಯು ಕ್ಲಬ್ ಸಂಚಾಲಕ ವಿಘ್ನೇಶ್ವರ ನಾಯ್ಕ ಪಾಲ್ಗೊಂಡಿದ್ದರು.

ಬಸವರಾಜ ಅನ್ವರಿಯವರ ಹುಟ್ಟು ಹಬ್ಬ ರೋಗಿಗಳಿಗೆ ಹಣ್ಣು ವಿತರಣೆ



ಮಲ್ಲನ ನುಡಿ ವಾರ್ತೆ ಮಸ್ಕಿ

ಕೇಂದ್ರದ ಮಾಜಿ ಸಚಿವ ಬಸವರಾಜ ಪಾಟೀಲ್ ನ್ವರಿಯವರ ಹುಟ್ಟು ಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗದಿಂದ ಶನಿವಾರ ಪಟ್ಟಣದ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ : ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಸೂಗಣ್ಣ ಬಾಳೇಕಾಯಿ, ಎಂ.ಅಮರೇಶ , ನಾಗರಾಜ ಯಂಬಲದ, ಮೌನೇಶ ನಾಯಕ, ಮಂಜುನಾಥ ಮಾಟೂರು, ಸುರೇಶ ಬ್ಯಾಳಿ, ಸೂಗಪ್ಪ ಮರಳದ, ಕೃಷ್ಣ ಚಿಗರಿ, ಶಿವು ಬ್ಯಾಳಿ ಸೇರಿದಂತೆ ಇತರರಿದ್ದರು.

ಯಶಸ್ವಿಯಾಗಿ ಸಂಪನ್ನಗೊಂಡ ಜೈನಬೀರ ದೇವರ ವರ್ಧಂತಿ ಉತ್ಸವ

ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಬೇಲೆಕೇರಿಗ್ರಾಮದ ಶ್ರೀಕಳಸದೇವ,ಮಹಾದೇವ ಹಾಗೂ ಪರಿವಾರ ದೇವರುಗಳ ಅಡಿಯಲ್ಲಿ ಬರುವ ಜೈನಬೀರದೇವರ ವರ್ಧಂತಿ ಉತ್ಸವವು ಗ್ರಾಮಸ್ಥರ ಆಸಯದಂತೆ ತಾಲೂಕಾ ಆಡಳಿತ, ಪೊಲೀಸ್ ಇಲಾಖೆ ಅಂಕೋಲಾ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಯಿತು.

ವರ್ಧಂತಿ ಉತ್ಸವದ ನಿಮಿತ್ತವಾಗಿ ಏ. 9ರಂದು ಸಂಜೆ 3.30ಕ್ಕೆ ತಾಲೂಕಾ ಪಂಚಾಯತ ಸಭಾಂಗಣದಲ್ಲಿ ತಾಲೂಕಾ ಆಡಳಿತ ಹಾಗೂ

ಜಿಲ್ಲೆಗೆ ಉತ್ತಮ ಸಾಧನೆ ಮಾಡಿದ ಯರಗೋಳ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ತಾಲೂಕಿನ ಯರಗೋಳ ಗ್ರಾಮದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ ನಮ್ಮ ಜಿಲ್ಲೆಗೆ ಕೀರ್ತಿ ತಂದು ಕೊಟ್ಟಿದಾರೆ ಕಾಲೇಜಿನಲ್ಲಿ ಒಟ್ಟು 44 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಅದರಲ್ಲಿ 39 ವಿದ್ಯಾರ್ಥಿಗಳು ಉತೀರ್ಣರಾಗಿದ್ದಾರೆ ಅದರಲ್ಲಿ ಎಂಟು ವಿದ್ಯಾರ್ಥಿಗಳು ಡಿಸ್ಟೆನ್ಶನ್ನಲ್ಲಿ ಪಾಸಾಗಿದ್ದಾರೆ 27 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ ಇಬ್ಬರು ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ ಒಟ್ಟು ಕಾಲೇಜಿನ ಫಲಿತಾಂಶ 88. 63 ಆಗಿದ್ದು ಜಿಲ್ಲೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಸಂವಿಧಾನ ಗೌರವಿಸುವವರೇ ಪಕ್ಷ ಕಟ್ಟಲು ಸಾಧ್ಯ ವೆಂಕಟಸ್ವಾಮಿ

• ಮಲ್ಲಮ್ಮ ನುಡಿ ವಾರ್ತೆ, ಹೊಳೆನರಸೀಪುರ

ಸಂವಿಧಾನವನ್ನು ಗೌರವಿಸುವ ಹಾಗೂ ದಲಿತ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಮತ್ತು ಸಮತಾ ಸೈನಿಕ ದಳಕ್ಕೆ ಸೇರ್ಪಡೆಯಾಗಿ ದುಡಿಯುವವರೇ ಪಕ್ಷವನ್ನು ಬಲಪಡಿಸಲು ಸಾಧ್ಯ ಎಂದು ಮುಖಂಡರು ಹೇಳಿದರು.

ಸಂವಿಧಾನದ ಮೌಲ್ಯಗಳನ್ನು ಒಪ್ಪಿಕೊಂಡು ಗೌರವಿಸುವ ಎಲ್ಲರೂ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ. ಇದು ಸಂಘಟನೆಯ ಬಲವರ್ಧನೆಗೆ ಕಾರಣವಾಗುತ್ತಿದೆ ಎಂದು ಹೇಳಿದರು.

ರಾಜಕೀಯ ಪೈಪೋಟಿ ಹೆಚ್ಚು ಇರುವ ತಾಲೂಕಿನಲ್ಲಿ ಕಚೇರಿ ಸ್ಥಾಪನೆಯಾಗಿರುವುದು ಸಮಾಜದಲ್ಲಿ ಒಳ್ಳೆಯ ಬೆಳವಣಿಗೆಯ ಸಂಕೇತವಾಗಿದೆ. ಇದೇ ಮಾದರಿಯಲ್ಲಿ ಎಲ್ಲಾ ಜಿಲ್ಲೆಗಳು ಹಾಗೂ ತಾಲೂಕುಗಳಲ್ಲಿ ಕಾರ್ಯಕರ್ತರ ಸೇರ್ಪಡೆ ಹೆಚ್ಚಿಸಿ, ಪಕ್ಷದ ಕಚೇರಿಗಳನ್ನು ಸ್ಥಾಪಿಸುವ ಕಾರ್ಯ ಮುಂದುವರಿಯಬೇಕು ಎಂದು ಕರೆ ನೀಡಿದರು.

ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ 6ನೇ ತರಗತಿಗೆ ಪ್ರವೇಶ ಪರೀಕ್ಷೆ



• ಮಲ್ಲಮ್ಮ ನುಡಿ ವಾರ್ತೆ , ಬಳ್ಳಾರಿ

ಜಿಲ್ಲೆ ಕಂಪ್ಲಿ ತಾಲೂಕಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ 6ನೇ ತರಗತಿಯ ಪ್ರವೇಶ ಪರೀಕ್ಷೆ 96 ವಿದ್ಯಾರ್ಥಿಗಳ ಪೈಕಿ 85 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ 11 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಎಂದು ಪ್ರಾಂಶುಪಾಲರು ಬಸವರಾಜ್ ಅವರು ಮಾಹಿತಿ ತಿಳಿಸಿದರು.

ಪರೀಕ್ಷೆ ಕೇಂದ್ರ ಸುತ್ತಲೂ ಪೊಲೀಸ್ ಬಿಗಿ ಭದ್ರತೆ ಹಾಗೂ ಯಾವುದೇ ರೀತಿ ತೊಂದರೆ ಹಾಗಲಾರದಂಗೆ ಪರೀಕ್ಷೆ ನಡೆಸಲಾಗುವುದು ಎಂದು ಮಾಹಿತಿ ತಿಳಿಸಿದರು.

ಸತತ ಪರಿಶ್ರಮ ನಮ್ಮ ಭವಿಷ್ಯ ನಿರ್ಮಿಸುತ್ತದೆ: ಶೃಷ್ಟಿ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲ್ಯಾಣ ಕರ್ನಾಟಕ ಪರಿಶ್ರಮವಾದಿಗಳ ಫಲವತ್ತಾದ ಭೂಮಿಯಾಗಿದೆ ಎಂದು ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕ ರಾಜ್ಯಕ್ಕೆ ರ್‍ಯಾಂಕ್ ಬಂದ ಕಲಬುರ್ಗಿಯ ಕುವರಿ ಕುಮಾರಿ ಶೃಷ್ಟಿ ಮಲ್ಲಿನಾಥ ಪಾಟೀಲ ಹೇಳಿದರು. ಕಲಬುರಗಿ ನಗರದ ಸಂತೋಷ ಕಾಲೋನಿಯ ಕೆಎಚ್ ಬಿ ಗ್ರೀನ್ ಪಾರ್ಕ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಡಾವಣೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತ ನಮ್ಮಲ್ಲಿ ಸೌಲಭ್ಯಗಳು ಕಡಿಮೆ ಇದ್ದರೂ, ನಮ್ಮ ಕನಸುಗಳು ದೊಡ್ಡದಾಗಬೇಕು. ನನ್ನ ತಂದೆ–ತಾಯಿಯ ತ್ಯಾಗ, ಗುರುಗಳ ಮಾರ್ಗದರ್ಶನ ಇಲ್ಲದೆ ನಾನು ಇಲ್ಲಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ನಾನು ಎದುರಿಸಿದ ಪ್ರತಿಯೊಂದು ಕಷ್ಟವೂ ನನಗೆ ಪಾಠವಾಯಿತು.

ನಾನು ಹೇಳಬೇಕಾದದ್ದು ಇಷ್ಟೆ ಪರಿಸ್ಥಿತಿ ಹೇಗಿದ್ದರೂ, ನಿಮ್ಮ ಕನಸುಗಳನ್ನು ಬಿಡಬೇಡಿ. ನಿಮ್ಮ ಪರಿಶ್ರಮವೇ ನಿಮ್ಮ ಭವಿಷ್ಯವನ್ನು ನಿರ್ಮಿಸುತ್ತದೆ ಎಂದು ಹೇಳಿದರು. ಸಂಘದ ಅಧ್ಯಕ್ಷರಾದ ಸಂಜೀವಕುಮಾರ ಶೆಟ್ಟಿ, ಶಿಕ್ಷಣ ಪ್ರೇಮಿ ಸಂಗಮೇಶ ಸರಡಗಿ, ನ್ಯಾಯವಾದಿ ಹಣಮಂತರಾಯ ಅಟ್ಟೂರ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀನಿವಾಸ ಬುಜ್ಜಿ, ಬಸವರಾಜ ಹೆಳವಾರ, ದಿಲೀಪಕುಮಾರ ಭಕ್ರೆ, ಸಂಜೀವಕುಮಾರ ಮಡ್ಡೆ, ಬಸವರಾಜ ಕೊರಳ್ಳಿ, ಸೂರ್ಯಕಾಂತ ಸಾವಳಗಿ, ಹಣಮಂತ ಪೂಜಾರಿ, ಸಾಯಿ ಟೇಲರ ಸೇರಿದಂತೆ ಅನೇಕ ಜನ ಭಾಗವಹಿಸಿದರು. ಇದೆ ಸಂದರ್ಭದಲ್ಲಿ ಕು.ಶ್ರಷ್ಟಿ ಪಾಟೀಲ ಹಾಗೂ ಅವರ ತಾಯಿಯಾದ ಸವಿತಾ ಪಾಟೀಲರಿಗೆ ಸನ್ಮಾನಿಸಲಾಯಿತು.



ರೆಡ್ಡಿ ಬಂಧು ಎಲ್ಲಾ ಒಂದು



• ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ

ರೆಡ್ಡಿ ಸಮಾಜ ಯುವ ಘಟಕ ಕಲಬುರಗಿ (ರಿ) ಯನ್ನು ರಚಿಸಿ ಈ ಕೆಳಕಂಡಂತೆ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.1) ವಿಶ್ವನಾಥರೆಡ್ಡಿ ಕಾಮರೆಡ್ಡಿ – ಅಧ್ಯಕ್ಷರು . 2) ಸುನೀಲಕುಮಾರ ರೆಡ್ಡಿ –ಉಪಾಧ್ಯಕ್ಷರು . 3) ಡಾ! ಆನಂದರೆಡ್ಡಿ ಎಮ್ ಪಟಪಳ್ಳಿ–ಉಪಾಧ್ಯಕ್ಷರು. 4) ಮಲ್ಲಾರೆಡ್ಡಿ ಎಸ್ ಸಾಹುಕಾರ–ಪ್ರಧಾನ ಕಾರ್ಯದರ್ಶಿ . 5) ನಾರಾಯಣರೆಡ್ಡಿ ಬಟಗೇರಾ–ಸಹ ಕಾರ್ಯದರ್ಶಿ 6) ಮಹೇಶರೆಡ್ಡಿ ಮಾಡಬೂಳ–ಸಹ ಕಾರ್ಯದರ್ಶಿ 7) ನಾಗೇಶ ಬಿ ರೆಡ್ಡಿ–ಸಂಘಟನಾ ಕಾರ್ಯದರ್ಶಿ 8) ಬಸವರಾಜ ಹಾಗರಗುಂಡಗಿ–ಸಂಘಟನಾ ಕಾರ್ಯದರ್ಶಿ. 9) ರಾಕೇಶರೆಡ್ಡಿ ಹೊಕ್ರಾಣಿ–ಖಜಾಂಚಿ . 10) ಮಲ್ಲಿಕಾರ್ಜುನರೆಡ್ಡಿ ಕೋಳೂರ–ಸದಸ್ಯರು 11) ಆನಂದ ಬಿರಾದರ–ಸದಸ್ಯರು. 12) ಗಣಪತಿ ಎನ್ ರೆಡ್ಡಿ –ಸದಸ್ಯರು .13) ಸಂತೋಷರೆಡ್ಡಿ ವೈಜಾಪೂರ–ಸದಸ್ಯರು .14) ನಿಖಿಲ್ ರೆಡ್ಡಿ–ಸದಸ್ಯರು . 15) ವೈಭವ್ ರೆಡ್ಡಿ– ಸದಸ್ಯರು.

ಆರ್ ಡಿ ಎಸ್ ಎಸ್ ಪದಾಧಿಕಾರಿಗಳ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆ, ಕೆಂಭಾವಿ

ಪಟ್ಟಣದ ಆನಂದ ಬುದ್ಧ ವಿಹಾರದದಲ್ಲಿ ರವಿವಾರ ಸುರಪುರ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲೂಕು ಸಮಿತಿ ಸುರಪುರ ನೇತೃತ್ವದಲ್ಲಿ ನೂತನ ಕೆಂಭಾವಿ ಹೋಬಳಿ ಶಾಖೆಯ ಪದಾಧಿಕಾರಿಗಳ ಆಯ್ಕೆ ನಡೆಯಿತು.

ಹೋಬಳಿ ಸಂಚಾಲಕರಾಗಿ ತಿಪ್ಪಣ ಬಿ ಅಗ್ನಿ, ಸಂಘಟನಾ ಸಂಚಾಲಕ ರಾಯಪ್ಪ ಎಂ ಯತ್ನಾಳ್, ಸಂ.ಸಂಚಾಲಕರು ಮಹೇಶ್ ಸಿ ಕಟ್ಟಿಮನಿ, ಸೈದಪ್ಪ ಕೆ ಅರಳಗುಂಡಗಿ, ಮಾಳಪ್ಪ ಜಿ ಯತ್ನಾಳ್, ನಿಂಗಪ್ಪ ಬಿ ನಡಕೂರ್, ಪರಶುರಾಮ ಎಸ್ ಕಡಕೋಳ ಹಾಗೂ ಖಜಾಂಚಿಯಾಗಿ ಹಣಮಂತ ಅಂಬ್ರಬೇಡ ಆಯ್ಕೆಯಾದರು

ಸಭೆಯ ಅಧ್ಯಕ್ಷತೆ ಅಧ್ಯಕ್ಷ ಮಾಳಪ್ಪ ಕಿರದಳ್ಳಿ ವಹಿಸಿದ್ದರು. ರಾಜ್ಯ ಸಂಘಟನಾ ಸಂಚಾಲಕರಾದ ರಾಮಣ್ಣ ಕಲದೇವನಹಳ್ಳಿ ಹಿರಿಯ ಮುಖಂಡರಾದ ಪರಶುರಾಮ ಬಳಬಟ್ಟಿ, ತಾಲೂಕು ಸಂಚಾಲಕರಾದ ಶರಣಪ್ಪ ತಳವಾರಗೇರ ,ಜಿಲ್ಲಾ ಸಂ ಸಂಚಾಲಕರಾದ ಭೀಮರಾಯ ಅಗ್ನಿ, ಭೀಮಶಂಕರ ಸೋಮನಾಳಕರ್ ಬಸವರಾಜ ಪೂಜಾರಿ ಶರಣಬಸು ವಜ್ಜಲ್, ಸಮಾಜದ ಮುಖಂಡರಾದ ಶಿವಪ್ಪ ಕಂಬಾರ, ಪಾಂಡುರಂಗ ವಕೀಲರು, ಪ್ರಕಾಶ್ ಮುಷ್ಟಳ್ಳಿ, ಪರಶುರಾಮ ಸಾಸನೂರ, ಮಂಜುನಾಥ ಕೊಂಬಿನ ಇದ್ದರು.

ಪ್ರವಚನ ಆಲಿಕೆಯಿಂದ ಮನಸ್ಸು ಹಗುರ: ನಂದವಾಡಗಿ ಶ್ರೀ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ದಿನನಿತ್ಯದ ಬದುಕಿನ ಜಂಜಾಟದಲ್ಲಿ ಪುರಾಣ, ಪ್ರವಚನ ಆಲಿಸುವುದರಿಂದ ಮನಸ್ಸು ಹಗುರವಾಗುತ್ತದೆ ಎಂದು ನಂದವಾಡಗಿ ಡಾ. ಅಭಿನವ ಚೆನ್ನಬಸವ ಶಿವಾಚಾರ್ಯ ಸ್ವಾಮೀಜಿ ಗುರುವಾರ ಹೇಳಿದರು.

ಪಟ್ಟಣದ ಕುಂಬಾರ ಓಣಿಯ ಶ್ರೀ ಬಸವೇಶ್ವರ ದೇವಸ್ಥಾನದ 4ನೇ ವರ್ಷದ ರಥೋತ್ಸವ ಮತ್ತು ಬಸವ ಜಯಂತಿ ಉತ್ಸವ ಅಂಗವಾಗಿ ಹಮ್ಮಿಕೊಂಡಿರುವ ಸುಕ್ಷೇತ್ರ ಗುರಗುಂಟಾ ಶ್ರೀ ಅಮರೇಶ್ವರ ಚರಿತಾಮೃತ ಪುರಾಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮೊದಲ ದಿನದ ತಮ್ಮ ಅಮೃತವಾಣಿಯಲ್ಲಿ ಮಾತನಾಡಿದ ಅವರು ಚಿಂತೆಯಿಂದ ಭಗವಂತನ ಚಿಂತನೆಯಡೆಗೆ ಕೊಂಡೊಯ್ಯುವುದು ಪ್ರವಚನ. ಸಂಸ್ಕೃತ ದೇಶದ ದೇವಭಾಷೆಯಾಗಿದೆ. ನಿತ್ಯ ಶರಣರ ಪುರಾಣ, ಪ್ರವಚನ ಆಲಿಸುವುದರಿಂದ ಮನಸ್ಸು ಹಗುರವಾಗುತ್ತದೆ. ಮನುಷ್ಯ ದೈನಂದಿನ ಜೀವನದಲ್ಲಿ ಒಳ್ಳೆಯ ಚಿಂತನೆಗಳನ್ನ ಮನಸ್ಸಿಲ್ಲಿಟ್ಟುಕೊಳ್ಳಬೇಕು. ಅಹಂಕಾರವಿದ್ದಲ್ಲಿ ಭಗವಂತ ಇರುದಿಲ್ಲ. ಸದ್ಗುಣವಂತರ ಮನಸ್ಸಿನಲ್ಲಿ ದೇವರು ನೆಲೆಸುತ್ತಾನೆ. ಮನುಷ್ಯರ ಮನಸ್ಸು ಕಟ್ಟುವಂತ ಕೆಲಸ ಮಾಡುವುದೇ ನಿಜವಾದ ಶರಣರ ಕಾರ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಗುರಗುಂಟಾ ಶ್ರೀ ಅಮರೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಪುರಾಣದಲ್ಲಿ ತಲೆಕಟ್ ಮನೋಹರ್ ಹಿರೇಮಠ ಗವಾಯಿಯರ ಸಂಗೀತ. ಕುಷ್ಟಗಿ ಪ್ರತಾಪಕುಮಾರ ಹಿರೇಮಠರ ತಬಲಾ ವಾದಕ ಕೇಳುಗರ ಮನಸೂರೆಗೊಳಿಸಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಮಲ್ಲಪ್ಪ ಮಾಟೂರು, ವೀರಶೈವ ಸಮಾಜದ ಅಧ್ಯಕ್ಷ ಸುರೇಶಗೌಡ ಪಾಟೀಲ್, ದೇವಸ್ಥಾನ ಮಹಿಳಾ ಸಮಿತಿ ಅಧ್ಯಕ್ಷೆ ಶಶಿಕಲಾ ಬೋವಿ, ಲಿಂಗಪ್ಪ ಹಣಿಗಿ, ಶಿವಪ್ಪ ಸುಂಕದ, ವೀರಭದ್ರಯ್ಯ ಸರಗಣಾಚಾರಿ, ಅಮರೇಶ ತಳೇಖಾನ್, ನಾಗರಾಜ ದಫೇದಾರ್, ಅನುರಾಧ ಸಿದ್ಧಯ್ಯ ಸಾಲಿಮಠ, ತೋಟಮ್ಮ ಅಮರೇಶ ಅಂಗಡಿ, ಬಸವರಾಜ ಬಳಿಗಾರ, ಶರಣಪ್ಪ ಕುಂಬಾರ, ದೇವಸ್ಥಾನ ಸಮಿತಿ ಪದಾಧಿಕಾರಿಗಳು ಹಾಗೂ ಸಕಲ ಸದ್ಭಕ್ತರು ಇದ್ದರು.

ಸರ್ಕಾರಿ ಕಟ್ಟಡ ದುಸ್ಥಿತಿ: ಶೌಚಾಲಯ ಅನೈತಿಕ ಚಟುವಟಿಕೆಗೆ ಆಶ್ರಯ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದಲ್ಲಿನ ಹಲವಾರು ಸರ್ಕಾರಿ ಕಟ್ಟಡಗಳು ಬಹುದಿನಗಳಿಂದ ಬಳಕೆ–ಯಾಗದೆ ಪಾಳು ಬಿದ್ದಿರುವುದರಿಂದ ಅವು ಅನೈತಿಕ ಚಟುವಟಿಕೆಗಳ ಕೇಂದ್ರಗಳಾಗಿ ಹಾಗೂ ಶೌಚಾಲಯಗಳಾಗಿ ಮಾರ್ಪಟ್ಟಿರುವುದು ಸಾರ್ವಜನಿಕರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಒಂದು ಕಾಲದಲ್ಲಿ ಸರ್ಕಾರಿ ಆಸ್ಪತ್ರೆಯಾಗಿದ್ದ ಪಿಡಬ್ಲ್ಯೂಡಿ ಇಲಾಖೆಯ ಕಚೇರಿ ಕಟ್ಟಡವು ಈಗ ಸಂಪೂರ್ಣವಾಗಿ ನಿರ್ಲಕ್ಷ್ಯ–ಕ್ಕೆ ಒಳಗಾಗಿದ್ದು, ಗಡಿ ಮಹಲ್ಲಾ ಪ್ರದೇಶದಲ್ಲಿರುವ

ಈ ಕಟ್ಟಡ ಮದ್ಯಪ್ರಿಯರಿಗೆ ತಾಣ ಹಾಗೂ ಶೌಚಾಲಯವಾಗಿ ಮಾರ್ಪಟ್ಟು ಇಲ್ಲಿ ಜನರು ಮುಕ್ತವಾಗಿ ಶೌಚ–ಕ್ಕೆ ಬಳಸುತ್ತಿರುವುದರಿಂದ ತೀವ್ರ ದುರ್ಗಂಧ, ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಸ್ಥಳೀಯ ನಿವಾಸಿಗಳು ತೀವ್ರತೊಂದರೆ ಅನುಭವಿಸುತ್ತಿದ್ದಾರೆ.

ಇದೇ ರೀತಿ ಪಾಳು ಬಿದ್ದಿರುವ ಕಟ್ಟಡಗಳ ವಿವರ. ಕೆಚ್ ಡಿಸಿ ಕಾಲೋನಿಯಲ್ಲಿ ಇರುವ ಕೈಮಗ್ಗ ನೇಕಾರರ ಕಟ್ಟಡವು ಸುಮಾರು ಹನ್ನೆರಡು ವರ್ಷಗಳಿಂದ ಯಾವುದೇ ಚಟುವಟಿಕೆಗಳಿಲ್ಲದೆ ಪಾಳು ಬಿದ್ದಿದೆ.

ಗಾಂಧಿ ಮೈದಾನದಲ್ಲಿರುವ ಕೈಮಗ್ಗ ಉಪಕೇಂದ್ರವೂ ನಿರ್ಲಕ್ಷ್ಯದಿಂದ ಶೌಚಾಲಯವಾಗಿ ಮಾರ್ಪಟ್ಟಿದ್ದು,

ಸಮೀಪದ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಸಂಕಷ್ಟ ಉಂಟುಮಾಡುತ್ತಿದೆ.

ಪದವಿ ಪೂರ್ವ ಪ್ರೌಢ ಶಾಲಾ ಆವರಣದಲ್ಲಿ ಉದ್ಘಾಟನೆಗೊಳ್ಳದೆ ಹಾಳಾದ ಶೌಚಾಲಯ. ಹಲವಾರು ಸರ್ಕಾರಿ ಕಟ್ಟಡಗಳು ಲಿಡ್ಕರ್ ಮಳಿಗೆ ಸೇರಿದಂತೆ ಹಲವು ಇದೇ ಸ್ಥಿತಿಗೆ ತಲುಪಿದೆ. ಸಂಬಂಧಪಟ್ಟ ಪಿಡಬ್ಲ್ಯೂ, ಜವಳಿ ಉದ್ಯಮ,

ಜಿಲ್ಲಾ ಪಂಚಾಯಿತಿ, ತಾಲೂಕ ಪಂಚಾಯತಿ, ಪುರಸಭೆ ಅಧಿಕಾರಿಗಳು ತಕ್ಷಣ ಗಮನಹರಿಸಿ ಈ ಕಟ್ಟಡಗಳನ್ನು ಸಾರ್ವಜನಿಕ ಉಪಯೋಗಕ್ಕೆ ತರುವಂತೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಮನವಿ ಮಾಡಿ ಈ ಕಟ್ಟಡಗಳನ್ನು ಕಚೇರಿ,

ಉದ್ಯಾನವನ, ಸಮುದಾಯ ಭವನ ಅಥವಾ ಬೇರೆ ಯಾವುದೇ ಉಪಯುಕ್ತ ಯೋಜನೆಗಳಿಗೆ

ಬಳಸುವಂತೆ ಪರಿವರ್ತನೆ ಮಾಡುವುದೇ ಉತ್ತಮ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

ದಾಸೋಹ ಮಠದ ಜಾತ್ರಾ ಮಹೋತ್ಸವ; ಹೊಸ ಜೀವನಕ್ಕೆ ಕಾಲಿಟ್ಟ 36 ಜೋಡಿಗಳು

ಮಠ ಮಾನ್ಯಗಳಿಂದ ಬಡ ಕುಟುಂಬಗಳಿಗೆ ಆಸರೆ; ದರ್ಶನಾಪೂರ



• ಮಲ್ಲಮ್ಮ ನುಡಿ ವಾರ್ತೆ, ಕೆಂಭಾವಿ

ನಗನೂರು ದಾಸೋಹ ಮಠವು ಸತತ 24 ವರ್ಷಗಳಿಂದ ಯಾವುದೇ ಅಡೆತಡೆವಿಲ್ಲದೆ ಪೂಜ್ಯರೊಂದಿಗೆ ಗ್ರಾಮಸ್ಥರೆಲ್ಲರೂ ಸೇರಿ ಜಾತ್ರಾ ಮಹೋತ್ಸವದ ಅಂಗವಾಗಿ ಸಾಮೂಹಿಕ ವಿವಾಹಗಳನ್ನು ನಡೆಸಿಕೊಂಡು ಬರುತ್ತಿರುವುದು ಸಂತಸ ತಂದಿದೆ ಎಂದು ಜಿಲ್ಲಾ ಉಸ್ತುವಾರಿ ಹಾಗೂ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಿಗಳ ಸಚಿವ ಶರಣಬಸಪ್ಪಗೌಡ ದರ್ಶನಾಪೂರ ಹೇಳಿದರು.

ಸಮೀಪದ ನಗನೂರ ಗ್ರಾಮದ ಶ್ರೀ ಶರಣಬಸವೇಶ್ವರ ದಾಸೋಹ ಮಠದ 179ನೇ ಜಾತ್ರಾ ಮಹೋತ್ಸವದ ನಿಮಿತ್ಯ ಶನಿವಾರ ಏರ್ಪಡಿಸಿದ್ದ 24ನೇ ವರ್ಷದ ಸರಳ ಸಾಮೂಹಿಕ ವಿವಾಹ ಮಹೋತ್ಸವ ಹಾಗೂ ಜಂಗಮ ಗಣಾರಾಧನೆಯ ನಿಮಿತ್ಯ ಧರ್ಮ ಸಭೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಠಗಳಲ್ಲಿ ನಡೆಯುವ ಸಾಮೂಹಿಕ ಮದುವೆಗಳಲ್ಲಿ ವಿವಾಹವಾಗುವ ನವದಂಪತಿಗಳು ಪುಣ್ಯವಂತರು. ನವ ದಂಪತಿಗಳಿಗೆ ಅನೇಕ ಸ್ವಾಮೀಜಿಗಳು ಇಲ್ಲಿಗೆ ಬಂದು ಆಶೀರ್ವಾದ ಮಾಡುತ್ತಾರೆ. ಶ್ರೀಗಳ ಆಶೀರ್ವಾದ ಪಡೆದ ನೀವು ಪುಣ್ಯವಂತರು ಎಂದ ಅವರು, ಹೊಸ ದಾಂಪತ್ಯಕ್ಕೆ ಕಾಲಿಟ್ಟ ವಧು–ವರರು ಪರಸ್ಪರ ಒಬ್ಬರನ್ನೊಬ್ಬರು ಅರಿತು ಜೀವನ ಸಾಗಿಸಬೇಕು. ಬಡವರ ಆರ್ಥಿಕ ಹೊರೆಯನ್ನು ತಡೆಯುವ ನಿಟ್ಟಿನಲ್ಲಿ ಮಠಮಾನ್ಯಗಳ ಕಾರ್ಯ ಶ್ಲಾಘನೀಯವಾದದ್ದು ಎಂದ ಅವರು, ಯುಪಿಎಸ್‌ಸಿ ಸಾಧಕಿ ಡಾ. ನಿವೇದಿತಾ ಭಾವಿಮನಿ ಅವರು ಈ ಬಾಗದ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದ್ದಾರೆ. ಫಲಿತಾಂಶದಲ್ಲಿ ಯಾದಗಿರಿ ಜಿಲ್ಲೆ ಕೊನೆಯ ಸ್ಥಾನದಲ್ಲಿದ್ದರು ಕೂಡ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯ ನಾಲ್ಕು ಜನ ಸಾಧನೆಗೈಯುವ ಮೂಲಕ ಮೊದಲನೆಯ ಸ್ಥಾನದಲ್ಲಿದ್ದಾರೆ. ಪಾಲಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದು ಸಚಿವರು ಸಲಹೆ ನೀಡಿದರು.

ಮಾಜಿ ಸಚಿವ ನರಸಿಂಹ ನಾಯಕ (ರಾಜೂಗೌಡ), ಮಾಜಿ ಶಾಸಕ ಗುರು ಪಾಟೀಲ ಶಿರವಾಳ, ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಅಮೀನರೆಡ್ಡಿ ಪಾಟೀಲ ಯಾಳಗಿ, ಜಿಪಂ ಮಾಜಿ ಉಪಾಧ್ಯಕ್ಷ ಶಂಕ್ರಣ್ಣ ವಣಿಕ್ಯಾಳ, ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ರಾಜಶೇಖರ ಸಾಹು ಗೂಗಲ್, ಯುಪಿಎಸ್‌ಸಿ ಸಾಧಕಿ ಡಾ. ನಿವೇದಿತಾ ಬಾವಿಮನಿ ಮಾತನಾಡಿದರು.

ದಾಸೋಹ ಮಠದ ಪೀಠಾಧಿಪತಿ ಶ್ರೀ ಶರಣಪ್ಪ ಶರಣರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದ ಸಾನಿಧ್ಯವನ್ನು ಕಲಕೇರಿ ಶ್ರೀ ಮರುಳಾರಾಧ್ಯ ಶಿವಾಚಾರ್ಯರು, ನಗನೂರ ಸೂಗೂರೇಶ್ವರ ಶಿವಾಚಾರ್ಯರು, ಮಾಗಣಗೇರಿಯ ಷ.ಬ್ರ. ಏಕಾಕ್ಷರ ಶಿವಾಚಾರ್ಯರು, ಶ್ರೀ ಜಗದೀಶ ಶರಣರು, ಶ್ರೀ ಖಂಡೆಪ್ಪ ತಾತಾ, ಶ್ರೀ ದೊಡ್ಡಪ್ಪ ತಾತಾ, ಪುರಾಣಿಕ ವೇದಮೂರ್ತಿ ಸೂರ್ಯಕಾಂತಯ್ಯ ಶಾಸ್ತ್

ಸೂಗೂರು ದೇವಸ್ಥಾನ,ಬೆಳ್ಳಿ ರಥ ಲೋಕಾರ್ಪಣೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ


ಜಾತಿರಹಿತಸಮ-ಸಮಾಜನಿರ್ಮಾಣವಾಗಬೇಕಾದರೆ ದ್ವೇಷ ಬಿಟ್ಟು ಎಲ್ಲರು ಪರಸ್ಪರ ಪ್ರೀತಿ ವಿಶ್ವಾಸದೊಂದಿಗೆಭಾವೈಕ್ಯತೆಯಿಂದಮನುಷ್ಯರಾಗಿ ಬಾಳಬೇಕಿದೆ.ಮೂಢನಂಬಿಕೆಬಿಟ್ಟುವೈಚಾರಿಕತೆ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶನಿವಾರ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸೂಗೂರ (ಎನ್) ಗ್ರಾಮದಲ್ಲಿ ಮಹಾತ್ಮ ಶ್ರೀ ಶ್ರೀ ಶ್ರೀ ಭೋಜಲಿಂಗೇಶ್ವರ ಸಿದ್ದ ಸಂಸ್ಥಾನ ಮಠದಿಂದ ಆಯೋಜಿಸಿದ ಶ್ರೀ ಶ್ರೀ ಶ್ರೀ ಭೋಜಲಿಂಗೇಶ್ವರರ ನೂತನ ದೇವಸ್ಥಾನ ಲೋಕಾರ್ಪಣೆ ಮತ್ತು ಮೂರ್ತಿ ಪ್ರತಿಷ್ಠಾಪನೆ, ನೂತನ ಬೆಳ್ಳಿ ರಥೋತ್ಸವ ಚಾಲನೆ ಹಾಗೂ ಕಲ್ಯಾಣ ಮಂಟಪ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಅನೇಕ ಜಾತಿ ಧರ್ಮಗಳಿವೆ, ಅನೇಕ ಭಾಷೆ ಸಂಸ್ಕೃತಿಗಳಿವೆ. ವೈವಿಧ್ಯತೆ ಇರುವ ಸಮಾಜದಲ್ಲಿ ಏಕತೆ ಪ್ರದರ್ಶನ ಮಾಡುವುದು ಅತ್ಯವಶ್ಯಕ. ಯಾವುದೇ ಧರ್ಮ ದ್ವೇಷ ಮಾಡಲು ಹೇಳುವುದಿಲ್ಲ ಎಲ್ಲರನ್ನೂ ಪ್ರೀತಿಸಿದಾಗಲೇ ಮಾನವ ಸಮಾಜ ನಿರ್ಮಾಣ ಸಾಧ್ಯ ಎಂದ ಅವರು, ಇದೇ ತತ್ವವನ್ನು ಸಾರಿದ ಮತ್ತು

ಸತ್ಯದ ಹಾದಿ ತೋರಿದ ಶ್ರೀ ಭೋಜಲಿಂಗೇಶ್ವರ ಮಠ ಸರ್ವ ಧರ್ಮದ ಭಕ್ತವೃಂದದ ಉದ್ಧಾರಕ್ಕೆ ಶ್ರಮಿಸುವ ಜಾತ್ಯಾತೀತ ಮಠವಾಗಿ ಬೆಳೆಯಲಿ ಎಂದು ಸಿಎಂ ಸಿದ್ದರಾಮಯ್ಯ ಹಾರೈಸಿದರು.

ಧರ್ಮದ ಹೆಸರಲ್ಲಿ ಜಾತಿಯನ್ನು ಒಡೆದು,



ಒಂದು ಧರ್ಮದ ಜನರನ್ನು ಮತ್ತೊಂದು ಧರ್ಮದ ವಿರುದ್ಧ ಎತ್ತಿಕಟ್ಟುವ ಪಟ್ಟಭದ್ರ ಹಿತಾಸಕ್ತಿಗಳು ನಮ್ಮ ನಡುವೆ ಇದ್ದಾರೆ. ನೀವು ಅಂತಹ ಪಟ್ಟಭದ್ರರ ಮಾತು ಕೇಳಬಾರದು. ಸರ್ವರನ್ನು ಪ್ರೀತಿಸುವ ಮನೋಭಾವನೆ ಬೆಳೆಸಿಕೊಳ್ಳಬೇಕು ಮತ್ತು ಒಗ್ಗಟ್ಟಾಗಿರಬೇಕು ಎಂದು ಸಮುದಾಯಕ್ಕೆ ಕರೆ ನೀಡಿದ ಸಿ.ಎಂ. ಅವರು, ಇದನ್ನೆ ಪೂಜ್ಯ ಭೋಜಲಿಂಗೇಶ್ವರ ಹೇಳಿದ್ದಾರೆ ಎಂದು ಪುನರುಚ್ಚರಿಸಿದರು.

ಸ್ವಚ್ಛ ಮನಸಿನಿಂದ ದೇವಸ್ಥಾನಕ್ಕೆ ಹೋಗಿ ನಮಗಷ್ಟೇ ಅಲ್ಲದೇ ಎಲ್ಲರಿಗೂ ಒಳ್ಳೆಯದು ಮಾಡು ಎಂದು ಪ್ರಾರ್ಥಿಸಿದಾಗ ಮಾತ್ರ ಫಲ ಸಿಗುತ್ತದೆ. ಬಸವಣ್ಣ, ಸೂಫಿ, ಸಂತರು ಕೂಡಾ ಇದನ್ನೇ ಪ್ರತಿಪಾದಿಸಿದರು. ಬಸವಣ್ಣ ಕಾಯಕ ಹಾಗೂ ದಾಸೋಹ ಎರಡನ್ನು ಒತ್ತಿಹೇಳಿದ್ದಾರೆ. ಎಲ್ಲರೂ ಕಷ್ಟಪಟ್ಟು ದುಡಿಯಬೇಕು. ಹಾಗೆ ಬಂದದನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕು. ಕಾಯಕ ಹಾಗೂ ದಾಸೋಹಗಳನ್ನು ಎಲ್ಲರೂ ಮಾಡಬೇಕು. ಕೆಲವರೇ ಮಾಡಿದರೆ ಅಸಮಾನತೆ ಸಮಾಜ ನಿರ್ಮಾಣವಾಗುತ್ತದೆ. ಪ್ರತಿಯೊಬ್ಬರಿಗೆ ಸಮಾನತೆ ಹಾಗೂ ಆರ್ಥಿಕಶಕ್ತಿ ಬಂದಾಗ ಮಾತ್ರ ಸಮಾನತೆ ಬರಲು ಸಾಧ್ಯ ಎಂದರು.

ಭೋಜಲಿಂಗೇಶ್ವರದೇವಾಲಯದಶಕ್ತಿಜನರಿಗೆ ತಿಳಿಸುವ ಕೆಲಸ ನೀವೆಲ್ಲ ಮಾಡಬೇಕು ಎಂದು ಹೇಳಿದ ಸಿಎಂ, ಬಸವಣ್ಣನವರ ಇವನಾರವ ಇವನಾರವ ಎಂದೆನಿಸದಿರಯ್ಯ ಎನ್ನುವ ವಚನ ಹಾಗೂ ಕನಕದಾಸರ ಕುಲಕುಲವೆಂದು ಹೊಡದಾಡದಿರಿ ಎನ್ನುವ ವಾಣಿಯನ್ನು ಸಿಎಂ ಉಚ್ಚರಿಸಿದರು.

ಬಸವಣ್ಣನವರ, ಕನಕದಾಸರ ಶರಣರ, ಸಾಧು ಸಂತರ ಸಮಾನತೆಯ ತತ್ವಗಳು ಇದ್ದರೂ ಕೂಡಾ ಇನ್ನೂಜಾತಿ ವ್ಯವಸ್ಥೆ ಹೋಗಿಲ್ಲ. ಇವನಾರವ ಎನ್ನುತ್ತೇವೆ ಹೊರತು ಇವ ನಮ್ಮವ ಎನ್ನುತ್ತಿಲ್ಲ. ಕನಕದಾಸರ ಉಕ್ತಿ ಯಂತೆ ಕುಲದ ಆಚೆಗೆ ನಾವೆಲ್ಲ ಮನುಷ್ಯರಾಗಿ ಬಾಳಬೇಕು ಎಂದು ಕರೆ ನೀಡಿದ ಸಿಎಂ, ಡಾ ಅಂಬೇಡ್ಕರ್ ಅವರ ಆಶಯದಂತೆ ಎಲ್ಲರೂ ಸಮಾನವಾಗಿ ಬಾಳಬೇಕು. ಈ ಎಲ್ಲ ತತ್ವಗಳು ಜಾರಿಗೆ ಬರಲು ಪ್ರತಿಯೊಬ್ಬರು ಆಚರಣೆ ಮಾಡಬೇಕು. ಜಾತಿ ವ್ಯವಸ್ಥೆಯ ವಿರುದ್ಧ ಚಾಲನೆ ಸಿಗಬೇಕಂದರೆ ಶಿಕ್ಷಣ ದೊರಕಿದಾಗ ಮಾತ್ರ ಸಮಾನತೆ ಸಿಗುತ್ತದೆ. ದೇವಸ್ಥಾನ ಉದ್ಘಾಟನೆ ನೆರವೇರಿಸಿದ್ದೇನೆ. ಇದು ಸಾರ್ಥಕವಾಗಬೇಕಾದರೆ ನೀವೆಲ್ಲ ಮನುಷ್ಯರಾಗಿ ಬಾಳಬೇಕು ಎಂದರು.

ಜಾತಿ ವ್ಯವಸ್ಥೆ ಸ್ವಲ್ಪ ಕಡಿಮೆಯಾಗಿದೆಯಾದರು ಇನ್ನೂ ಪೂರ್ಣವಾಗಿ ಹೋಗಿಲ್ಲ. ಅದು ತುಂಬಾ ಜಡತ್ವ ಹೊಂದಿದೆ. ಪ್ರತಿಯೊಬ್ಬರು ವೈಚಾರಿಕತೆ ಹಾಗೂ ವೈಜ್ಞಾನಿಕ ಹಿನ್ನೆಲೆಯ ಇರುವ ವಿದ್ಯೆ ಪಡೆದುಕೊಳ್ಳಬೇಕು. ಸಮಾಜದಲ್ಲಿ ಮೂಢನಂಬಿಕೆಗಳದಾಸರಾಗಬೇಡಿ. ಬಸವಣ್ಣನವರು ಆ ಕಾಲದಲ್ಲಿಯೇ ಕರ್ಮ ಸಿದ್ಧಾಂತ ತಿರಸ್ಕಾರ ಮಾಡಿದ್ದರು. ಈಗಲೂ ವಿದ್ಯಾವಂತರು ಇದನ್ನು ನಂಬುತ್ತಿರುವುದು ದುರಂತ. ಕರ್ಮ ಸಿದ್ಧಾಂತವೇ ಶುದ್ಧ ಸುಳು. ಅದನ್ನು ನಂಬಬೇಡಿ ಎಂದು ಜನ ಸಮುದಾಯಕ್ಕೆ ಕರೆನೀಡಿದರು.


ವಸತಿ ನಿಲಯ,ಯಾತ್ರಿಕ ನಿವಾಸಕ್ಕೆ ಅನುದಾನ: ಪೂಜ್ಯ ಹಿರಗಪ್ಪ ತಾತನವರ ಬೇಡಿಕೆಯಂತೆ ಸುಕ್ಷೇತ್ರದಲ್ಲಿ ವಸತಿ ನಿಲಯ ನಿರ್ಮಾಣ ಹಾಗೂ ಭಕ್ತಾದಿಗಳಿಗೆ ಯಾತ್ರಿ ನಿವಾಸ ಸ್ಥಾಪಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಲಿದೆ. ಯಾತ್ರಿನಿವಾಸಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಅವರು 1 ಕೋಟಿ ರೂ. ಹಣ ನೀಡುವ ಭರವಸೆ ನೀಡಿದ್ದಾರೆ. ವಸತಿ ನಿಲಯ ಪ್ರಾರಂಭಕ್ಕೆ ಸರ್ಕಾರ ಸಹಾಯ ಮಾಡಲಿದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ,ಭಕ್ತರ ಕೋರಿಕೆಯಂತೆ ಸುಕ್ಷೇತ್ರದ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ನೀಡಲಾಗುವುದು. ಇದಲ್ಲದೆ ಭಕ್ತರಿಂದ ನಿರ್ಮಿಸಲಾದದೇವಸ್ಥಾನದಜೀರ್ಣೋದ್ಧಾರಕ್ಕು ಸಹ ತಾವು ಬದ್ಧ ಇರುವುದಾಗಿ ತಿಳಿಸಿದರು.

ಶ್ರೀ ಶ್ರೀ ಶ್ರೀ ಭೋಜಲಿಂಗೇಶ್ವರ ಸಿದ್ಧ ಸಂಸ್ಥಾನ ಮಠದ ಪೂಜ್ಯ ಹಿರಗಪ್ಪ ತಾತನವರ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಪಾಟೀಲ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಶಾಸಕರಾದ ಎಂ.ವೈ.ಪಾಟೀಲ, ಅಲ್ಲಮಪ್ರಭು ಪಾಟೀಲ, ಚೆನ್ನಾರೆಡ್ಡಿ ತುನ್ನೂರು, ವಿಧಾನ ಪರಿಷತ್ ಶಾಸಕರಾದಚಂದ್ರಶೇಖರಪಾಟೀಲಹುಮನಾಬಾದ, ತಿಪ್ಪಣ್ಣಪ್ಪಕಮಕನೂರ, ಜಗದೇವ ಗುತ್ತೇದಾರ, ಕಲಬುರಗಿ ನಗರಾಭಿವರದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಕರ್ನಾಟಕ ದ್ವಿದಳಧಾನ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸೈಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಕರ್ನಾಟಕ ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವೆಂದ್ರಪ್ಪ ಮರತೂರು, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾನಾರಾಯಣರಾವ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಮಾಜಿ ಸಚಿವರೇವುನಾಯಕ ಬೆಳಮಗಿ, ಮುಖಂಡರಾದ ಶರಣಪ್ಪ ಮಾನೆಗಾರ, ಲಿಂಗಾರೆಡ್ಡಿ ಭಾಸರೆಡ್ಡಿ, ಭೀಮಣ್ಣ ಸಾಲಿ, ಭಾಗಣ್ಣಗೌಡ ಸಂಕನೂರ, ಶಿವಾನಂದ ಪಾಟೀಲ ಮರತೂರು, ಮಹೇಶ ರೆಡ್ಡಿ ಮುದ್ನಾಳ, ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಭಕ್ತವೃಂದ ಇವೊಂದು ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾಯಿತು. ಐ.ಟಿ.ಯು. ಸಿಂಡಿಕೇಟ್ ಸದಸ್ಯ ಮಹಾಂತೇಶ ಕೌಲಗಿ ನಿರೂಪಿಸಿದರು. ಶಂಕರಗೌಡ ಲಿಂಗಸುಗೂರು ಸ್ವಾಗತಿಸಿದರು.

ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮಲ್ಲಮ್ಮ ನುಡಿ ಪತ್ರಿಕೆ ಲೋಕಾರ್ಪಣೆ

ಮಲ್ಲಮ್ಮ ನುಡಿ ವಾರ್ತೆ ಬೀದರ:



ಗಡಿ ಜಿಲ್ಲೆ ಬೀದರನಲ್ಲಿ ಅತ್ಯಂತ ಸಡಗರದಿಂದ ನಡೆಯುತ್ತಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ, ಪತ್ರಿಕಾ ರಂಗದ ಗಣ್ಯರ ಸಮ್ಮುಖದಲ್ಲಿ 'ಮಲ್ಲಮ್ಮ ನುಡಿ' ಪತ್ರಿಕೆಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಿಗೆ ಅರ್ಪಿಸಲಾಯಿತು.

ನಗರದಲ್ಲಿ ಆಯೋಜಿಸಲಾಗಿದ್ದ ಈ ಭವ್ಯ ಸಮ್ಮೇಳನದ ವೇದಿಕೆಯಲ್ಲಿ, ಪತ್ರಿಕಾ ವರದಿಗಾರರಾದ ಪರಮೇಶ ರಾಂಪುರೆ ಅವರು ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರಿಗೆ ಪತ್ರಿಕೆಯ ಪ್ರತಿಯನ್ನು ನೀಡಿ ಗೌರವಿಸಿದರು.

ಜಿಲ್ಲೆಯಲ್ಲಿ ಮಾನವ ಹಕ್ಕು ಆಯೋಗದ ಅಧ್ಯಕ್ಷರ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಡಾ.ಟಿ.ಶ್ಯಾಮ್ ಭಟ್ ಮತ್ತು ಸದಸ್ಯರಾದ ಎಸ್.ಕೆ. ವಂಟಿಗೋಡಿ ಅವರು ಏಪ್ರಿಲ್ 28 ರಿಂದ29 ರ ವರೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು, ಪ್ರವಾಸದ ವಿವರಗಳು ಮುಂದಿನಂತಿವೆ..

ಏಪ್ರಿಲ್ 28 ರಂದು ಮಧ್ಯಾಹ್ನ 3 ಗಂಟೆಯಿಂದ 6 ಗಂಟೆಯವರೆಗೆ ಕಾರವಾರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ.

ಏಪ್ರಿಲ್ 29 ರಂದು ಬೆ.10.30 ರಿಂದ 11.30 ರ ವರೆಗೆ ಮಾನವ ಹಕ್ಕುಗಳ ಉಲ್ಲಂಘನೆ ಕುರಿತ ಜಿಲ್ಲೆಯಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ಕುರಿತು ವಿಚಾರಣೆ ನಡೆಸಿ, ನಂತರ ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ. 11.30 ರಿಂದ 12.30 ರ ವರೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ,ನಂತರ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ.ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ಕಾರವಾರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ ಎಂದು ಆಯೋಗದ ಸಾರ್ವಜನಿಕ ಸಂಪರ್ಕಾಧಿಕಾರಿಗಳು ತಿಳಿಸಿದ್ದಾರೆ.

ಸುಕನ್ಯಾ ಸಂಪತ್ತು ಅವರಿಗೆ ಮಲ್ಲಮ್ಮ ನುಡಿ ಪತ್ರಿಕೆ ಗೌರವ

ಮಲ್ಲಮ್ಮ ನುಡಿ ವಾರ್ತೆ ಬೀದರ:



ನಗರದಲ್ಲಿನಡೆಯುತ್ತಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ರಾಜ್ಯ ಮಟ್ಟದ ಜನಪ್ರಿಯ ಸುದ್ದಿ ವಾಚಕಿ ಮತ್ತು ಖ್ಯಾತ ನಿರೂಪಕಿ ಸುಕನ್ಯಾ ಸಂಪತ್ತು ಅವರಿಗೆ ಮಲ್ಲಮ್ಮ ನುಡಿ ಪತ್ರಿಕೆ ನೀಡಿ ಗೌರವಿಸಲಾಯಿತು.ಸಮ್ಮೇಳನದ ಕಾರ್ಯಕ್ರಮಗಳನ್ನು ಬಹಳ ಅಚ್ಚುಕಟ್ಟಾಗಿ ನಡೆಸಿಕೊಟ್ಟ ಸುಕನ್ಯಾ ಸಂಪತ್ತು ಅವರ ನಿರೂಪಣೆಯನ್ನು ಮೆಚ್ಚಿ ಈ ಗೌರವ ಸಮರ್ಪಿಸಲಾಯಿತು. ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಅವರಿಗೆ ಪತ್ರಿಕೆಯ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು.ಈ ವೇಳೆ ವರದಿಗಾರರಾದ ಪರಮೇಶ ರಾಂಪುರೆ ಹಾಗೂ ಇತರರು ಉಪಸ್ಥಿತರಿದ್ದರು.ಪತ್ರಕರ್ತರ ಸಮ್ಮೇಳನದಲ್ಲಿ ಸುಕನ್ಯಾ ಸಂಪತ್ತು ಅವರ ಉಪಸ್ಥಿತಿ ಮತ್ತು ಕಾರ್ಯಕ್ರಮ ನಿರ್ವಹಣೆ ಎಲ್ಲರ ಗಮನ ಸೆಳೆಯಿತು.

ನಂದಿ ಪ್ರಾಣ ಪ್ರತಿಷ್ಠಾಪನೆ ಕಳಸಾರೋಹಣ ಸಪ್ತಾ

ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ



ತಾಲೂಕಿನ ಘಾಟಬೋರಳ ಗ್ರಾಮದಲ್ಲಿ ಈಚೆಗೆ ಶ್ರೀ ಮಹಾದೇವ ಮಂದಿರದಲ್ಲಿ ಲಿಂಗ ಮತ್ತು ನಂದಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮ ನಿಮಿತ್ಯ ಪ್ರತಿ ನಿತ್ಯ ಅಖಂಡ ಹರಿನಾಮ ಸಪ್ತಾಹ ಹಾಗೂ ಶ್ರೀ ಗ್ರಂಥರಾಜ ಜ್ಞಾನೇಶ್ವರಿ ಪಾರಾಯಣ ಸೋಹಳಾ ಭಜನೆ ಕಾರ್ಯಕ್ರಮ ಸಡಗರ ಸಂಭ್ರದಿಂದ ಜರುಗಿತು. ಪ್ರತಿ ನಿತ್ಯ ಮಂದಿರದಲ್ಲಿ ವಿಶೇಷ ಪೂಜೆ ಅಭಿಶೇಕ ಭಜನೆ ವಿವಿಧ ಸಂಗೀತ ಕಾರ್ಯಕ್ರಮಗಳು ನಡೆದವು.

ಇದೆಸಂದರ್ಬಧಲ್ಲಿನಾರಾಯಣ ಮುಳೆ, ಜ್ಞಾನೇಶ್ವರಿ ಭೊಸಲೆ, ದೇವಿದಾಸರಾವ ದಾಡಗೆ, ವಿಠ್ಠರಾವ ಹಲಸೆ, ಪಂಡರಿನಾಥ ಪಾಟೀಲ್, ದಿಗಂಬರ ಸಗರ್, ಉದ್ಧವರಾವ ಹಲಸೆ, ಮಹೇಶ್ ಪಾಟೀಲ್, ಸಖರಾಮ ಹಲಸೆ, ನರಸಿಂಗರಾವ ಭಗಾಡೆ, ತಾನಾಜಿ ಸಾವರೆ, ತಮ್ಮಾರಡ್ಡಿ ಕೂಡಂಬಲ್, ಗೋವಿಂದರಡ್ಡಿ ಗೋಲಂಪಲ್ಲೆ, ದೋಂಡಿಬಾ ಇರದೆ, ನರೋಬಾ ಗಣೇಶ್, ವಿಠ್ಠಲ ದಾಢಗೆ, ಅರವಿಂದ ಮಾನಕರೆ, ಶಿವಾಜಿರಾವದಾಢಗೆ, ಭಾನುದಾಸ, ವಿಮಲಾಬಾಯಿ, ಭಾಗವತಬಾಯಿ, ಶೊಭಾಬಾಯಿ, ಕಮಲಾಬಾಯಿ, ತಾನೆಮ್ಮ, ಸತ್ಯಕಲಾಬಾಯಿ ಮುಂತಾದವರು ಪಾಲ್ಗೊಂಡಿದರು. ಬಂದಂತ ಭಕ್ತಾದಿಗಳಿಗೆ ಮಹಾ ಪ್ರಸಾದ ವಿತರಣೆ ಮಾಡಿದರು.


ಶ್ರೀ ರಕ್ಕಸಮ್ಮ ತಾಯಿಯ 52ನೇ ವರ್ಷದ ವಾರ್ಷಿಕೋತ್ಸವ



ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರದ 20ನೇ ವಾರ್ಡಿನ ನಾಲ್ ಬಂದ್ ಮೊಹಲ್ಲ ಶಿವ ಜ್ಯೋತಿ ನಗರದ ಶಂಕರ್ ಮಠ ಹತ್ತಿರ ಮುಖ್ಯ ರಸ್ತೆ ಶ್ರೀ ಶಕ್ತಿ ದೇವತೆ ರಕ್ಕಸಮ್ಮ ತಾಯಿಯ 52ನೇ ವರ್ಷದ ವಾರ್ಷಿಕೋತ್ಸವದ ಅದ್ದೂರಿಯಾಗಿ ಪೂಜಾ ಮಹೋತ್ಸವ ಶಾಸಕ ಜಿ ಟಿ ಹರೀಶ್ ಗೌಡ ರವರ ಪತ್ನಿ ವರ್ಷ ಜಿಟಿ ಹರೀಶ್ ಗೌಡ ಭಾಗವಹಿಸಿ ಪೂಜೆ ಸಲ್ಲಿಸಿ ತಾಯಿ ಆಶೀರ್ವಾದ ಪಡೆದರು ನಂತರ ಸುದ್ದಿಗಾರನಿಗೆ ಮಾತನಾಡಿ ನನ್ನ ಪತಿಯಾದ ಶಾಸಕ ಜಿಟಿ ಹರೀಶ್ ಗೌಡ ಬರಬೇಕಾದ ಕಾರ್ಯಕ್ರಮಕ್ಕೆ ಅವರಿಗ ಅನಿವಾರ್ಯ ಕೆಲಸ ಕಾರ್ಯಗಳಿಂದ ತುಂಬಾ ಅವಶ್ಯಕತೆ ಇರುವುದರಿಂದ ನಾನೇ ಸ್ಥಳೀಯರು ಏರ್ಪಡಿಸಿರುವ ಧಾರ್ಮಿಕ ಕಾರ್ಯಕ್ಕೆ ನಾನೇ ಬಂದಿದ್ದೇನೆ ಆದ್ದರಿಂದ ಶಾಸಕ ಜಿಟಿ ಹರೀಶ್ ಗೌಡ್ ನಿಮ್ಮ ಬೆಂಬಲಕ್ಕೆ ಸದಾ ನಿಮ್ಮ ಜೊತೆ ಇರುತ್ತಾರೆ ಹಾಗೂ ತಾಯಿಯ ಆಶೀರ್ವಾದ ಸದಾ ಅವರ ಮೇಲೆ ಇರಲಿ ಎಂದು ತಿಳಿಸಿದರುಭಕ್ತಾದಿಗಳು ತಾಯಿ ಹತ್ತಿರ ಏನು ಸಮಸ್ಯೆಗಳ ಬಗ್ಗೆ ಕೇಳಿಕೊಂಡಿದ್ದೀರಿ ಅದನ್ನು ತಾಯಿಯ ಆಶೀರ್ವಾದದಿಂದ ನಿಮಗೆ ಈಡೇರಿಲ್ಲಿ ಹಾಗೂಎಲ್ಲರಿಗೂ ಸುಖ ಶಾಂತಿ ಆಗಿ ಕಾಪಾಡಲಿ ನಮ್ಮ ನಾಡಿಗೆ ಒಳ್ಳೆ ಮಳೆ ಬೆಳೆ ಆಗಲಿ ಎಂದು ನಾನು ಆಶಿಸುತ್ತೇನೆ ಎಂದರು ಶಾಸಕ ಜಿ ಟಿ ಹರೀಶ್ ಗೌಡ ರವರ ಪತ್ನಿ ವರ್ಷ ಜಿ ಟಿ ಹರೀಶ್ ಗೌಡ ರವರನ್ನು ಗಾಣಿಗ ಸಮುದಾಯದ ಮುಖಂಡರು ಹಾಗೂ ಮಹಿಳೆಯರು ಸೇರಿ ಸನ್ಮಾನಿಸಿ ಗೌರವಿಸಲಾಯಿತು ಈ ಸಂದರ್ಭದಲ್ಲಿಮಾಜಿ ನಗರ ಸಭೆ ಸದಸ್ಯರಾದ ಅಧ್ಯಕ್ಷರಾದ ಶರವಣ ಸದಸ್ಯರಾದ ಸತೀಶ್ ಕುಮಾರ್ ರಾಣಿ ಪರಿಮಳ್ ಕೃಷ್ಣರಾಜಗುಪ್ತ ರಾಧಾ ಟಿ ಎ ಪಿ ಎಂ ಎಸ್ ನಿರ್ದೇಶಕರು ಬಾಬು ಹಾಗೂ ಜೆಡಿಎಸ ಮುಖಂಡರಾದ ಅಮಾನುಲ್ಲಾ ಖಾನ್ ಸುರೇಂದ್ರ ಸತೀಶ್ ಪಾಪಣ್ಣದೇವಸ್ಥಾನದ ಸಮಿತಿ ಮುಖಂಡರಿಗೆ.ಹಾಗೂ ಇನ್ನಿತರು ಹಾಜರಿದ್ದರು

ಶಿವಮೊಗ್ಗಾ: ನಾಗರಾಜ ನಾಯ್ಕ ಮಗಳು ಮೃದುಲ್ಲಾ ಮದುವೆ ಅದ್ದೂರಿ



ಅಂಕೋಲಾ : ಪಟ್ಟಣದ ಪ್ರತಿಷ್ಠಿತ ಎನ್. ಎಂ. ನಾಯ್ಕ ಕುಟುಂಬದಲ್ಲಿ ಜನಿಸಿದ ಡಾ. ನಾಗರಾಜ ಎನ್. ನಾಯ್ಕ ಇವರ ಮಗಳ ಮದುವೆ ಶಿವಮೊಗ್ಗಾದ ಲಗನ ಮಂದಿರಗಾಡಿಕೊಪ್ಪ ಮದುವೆ ಮಂಟಪದಲ್ಲಿ ನೆರವೇರಿತು. ಮಗಳಾದ ಮೃದುಲ್ಲಾ ನಾಯ್ಕ ರೋಹನ ಜಿ. ಸಾಗರ ವರನೊಂದಿಗೆ ಮದುವೆ ಬಂಧನದಲ್ಲಿ ಜೊತೆಯಾದರು.

ಈ ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಸಿದ್ದಾಪುರ ಶಾಸಕರಾದ ಭೀಮಣ್ಣ ನಾಯ್ಕ, ಮಾಜಿ ಸಚಿವರಾದ ಕುಮಾರ ಬಂಗಾರಪ್ಪ, ಮಾಜಿ ಶಾಸಕರಾದ ಭಟ್ಕಳ ವಿಧಾನಸಭಾ ಕ್ಷೇತ್ರ ಜೆ.ಡಿ.ನಾಯ್ಕ, ಮಾಜಿ ಸಚಿವರಾದ ಆನಂದ ಅಸ್ನೋಟಿಕರ, ಕುಮಟಾ ಜೆಡಿಎಸ್ ಮುಖಂ

ಮಾನದಂಡದೊಂದಿಗೆ ವಿತರಣೆ ಮಾಡಲು ರಘು ಕರೆ



• ಮಲ್ಲಮ್ಮ ನುಡಿ ವಾರ್ತೆ, ಹುಣಸೂರು

ಸರ್ಕಾರದ ಮಹಾತ್ವಾಕಾಂಕ್ಷಿ ಅನ್ನಭಾಗ್ಯ ಯೋಜನೆಯಡಿ ರಾಜ್ಯದ ಎಲ್ಲಾ ಪಡಿತರ ಚೀಟಿ–ದಾರರಿಗೂ ಉಚಿತವಾಗಿ ಆಹಾರ ಧಾನ್ಯವನ್ನು ವಿತರಿಸುತ್ತಿದ್ದು, ನ್ಯಾಯಬೆಲೆ ಅಂಗಡಿಗಳು ಸರಿಯಾದ ಮಾನದಂಡದೊಂದಿಗೆ ವಿತರಣೆ ಮಾಡುವಂತೆ ತಾಲ್ಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷರಾದ ರಘು ಕಲ್ಕುಣಿಕೆ ಅವರು ತಿಳಿಸಿದರು.

ನ್ಯಾಯ ಬೆಲೆ ಅಂಗಡಿ ಮತ್ತು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ವತಿಯಿಂದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ನ್ಯಾಯಬೆಲೆ ಅಂಗಡಿ ಮಾಲೀಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,

ಬಡ ಜನರ ಜೀವನಕ್ಕೆ ಅನುಕೂಲವಾಗಲೆಂದು ಸರ್ಕಾರದಿಂದ ಎಲ್ಲಾ ಪಡಿತರ ಚೀಟಿದಾರರಿಗೆ ಉಚಿತವಾಗಿ ಅಕ್ಕಿ ಮತ್ತು ಇತರೆ ಧಾನ್ಯಗಳನ್ನು ವಿತರಿಸಲಾಗುತ್ತಿದೆ. ಆದರೆ ಸರಿಯಾದ ಮಾನದಂಡದೊಂದಿಗೆ ಪಡಿತರ ವಿತರಣೆ ಮಾಡುತ್ತಿಲ್ಲ ಎಂಬ ದೂರು ಕೇಳಿಬರುತ್ತಿದ್ದು, ಮುಂದಿನ ದಿನಗಳಲ್ಲಿ ಪಡಿತರ ವಿತರಣೆಯಲ್ಲಿ ಯಾವುದೇ ಲೋಪದೋಷ ಉಂಟಾಗದಂತೆ ಕಾರ್ಯನಿರ್ವಹಿಸಬೇಕೆಂದರು.

75 ವರ್ಷ ಮೇಲ್ಪಟ್ಟ ಹಿರಿಯ ಫಲಾನುಭವಿಗಳಿಗೆ ಮನೆ ಮನೆಗೆ ತೆರಳಿ ಪಡಿತರವನ್ನು ವಿತರಿಸುವಂತೆ ಸರ್ಕಾರ ಆದೇಶ ಮಾಡಿದ್ದರೂ ಸಹ ಈವರೆಗೂ ಆದೇಶ ಪರಿಪಾಲನೆಯಾಗುತ್ತಿಲ್ಲ ಎಂಬ ದೂರು ಕೇಳಿ ಬರುತ್ತಿದೆ. ಹಾಗಾಗಿ ನ್ಯಾಯಬೆಲೆ ಅಂಗಡಿಗೆ ಬರಲು ಸಾಧ್ಯವಾಗದಂತಹ ಫಲಾನುಭವಿಗಳನ್ನು ಗುರುತಿಸಿ ನೇರ ಮನೆ ಬಾಗಿಲಿಗೆ ಪಡಿತರ ವಿತರಣೆ ಮಾಡುವಂತೆ ಹಾಗೂ ಅಂತಹ ಫಲಾನುಭವಿಗಳಿಗೆ ಬಯೋಮೆಟ್ರಿಕ್ ನಿಂದ ವಿನಾಯಿತಿ ನೀಡಲು ಪಟ್ಟಿ ಸಿದ್ಧಪಡಿಸಿ ನೀಡಲು ತಿಳಿಸಿದರು.

ಇನ್ನು ಅಕ್ಕಿ ಮತ್ತು ಇತರೆ ಧಾನ್ಯಗಳನ್ನು ನೆಲದ ಮೇಲೆ ಸುರಿದು ವಿತರಣೆ ಮಾಡುತ್ತಿರುವುದರಿಂದ ಆಹಾರದ ಅಶುದ್ಧತೆ ಆಗುವ ಸಾಧ್ಯತೆಯಿದ್ದು, ಈ ರೀತಿಯ ದೂರುಗಳಿಗೆ ಆಸ್ಪದ ಕೊಡದಂತೆ ಶುಚಿತ್ವ ಕಾಪಾಡಲು ಅಂಗಡಿ ಮಾಲೀಕರಿಗೆ ಮಾರ್ಗದರ್ಶನ ನೀಡಿದರು.

ಈ ವೇಳೆ ತಾಲ್ಲೂಕು ಪಂಚಾಯಿತಿಯ ಯೋಜನಾಧಿಕಾರಿ ಎಂ.ಎಸ್.ರಾಜೇಶ್, ಆಹಾರ ಇಲಾಖೆ ಶಿರಸ್ತೇದಾರರಾದ ಲಕ್ಷ್ಮೀ, ಆಹಾರ ನಿರೀಕ್ಷಕರಾದ ಶರವಣ,

ಮಾದೇಗೌಡ, ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷರಾದ ಅಣ್ಣಯ್ಯನಾಯಕ, ಗ್ಯಾರಂಟಿ ಯೋಜನೆ ಸಮಿತಿಯ ಎಲ್ಲಾ ಸದಸ್ಯರು ಹಾಗೂ ತಾಲ್ಲೂಕಿನಲ್ಲಿರುವ ಎಲ್ಲಾ ನ್ಯಾಯಬೆಲೆ ಅಂಗಡಿಗಳ ಮಾಲೀಕರು ಉಪಸ್ಥಿತರಿದ್ದರು.

ದೇಹದ ಜೊತೆಗೆ ಮನಸ್ಸನ್ನು ಶುದ್ಧಿಗೊಳಿಸಲು ಸುದರ್ಶನ ಕ್ರಿಯೆ



• ಮಲ್ಲಮ್ಮ ನುಡಿ ವಾರ್ತೆ, ಕೆಂಭಾವಿ

ಸದೃಢದೇಹದಲ್ಲಿ ಸದೃಢಮನಸ್ಸಿರುತ್ತದೆ. ಮನಸ್ಸು ಸದೃಢವಾಗಿರಬೇಕು ಎಂದರೆ ಯೋಗ, ಪ್ರಾಣಾಯಾಮ ಅತ್ಯವಶ್ಯ ಎಂದು ಆರ್ಟ್ ಆಫ್ ಲೀವಿಂಗ್‌ನ ಯಾದಗಿರಿ ಜಿಲ್ಲಾ ಶಿಕ್ಷಕಿ ಶಿಲ್ಪಾ ಅವಂಟಿ ಹೇಳಿದರು.

ಪಟ್ಟಣದ ಸೌ.ಲಕ್ಷ್ಮೀದೇವಿ ವಾಮನರಾವ ದೇಶಪಾಂಡೆ ಸಭಾ ಭವನದಲ್ಲಿ ಆರ್ಟ್ ಆಫ್ ಲೀವಿಂಗ್ ವತಿಯಿಂದ ಹಮ್ಮಿಕೊಂಡಿದ್ದ ಹ್ಯಾಪಿನೆಸ್ ಪ್ರೋಗ್ರಾಂ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ದೈನಂದಿನ ಬದುಕಿನಲ್ಲಿ ಜನರು ಆರೋಗ್ಯದ ಕಡೆಗೆ ಗಮನ ಕೊಡುತ್ತಿಲ್ಲ. ಆರೋಗ್ಯವೆ ಭಾಗ್ಯ ಎನ್ನುವದನ್ನು ಮರೆತು ಹೋಗುತ್ತಿದ್ದಾರೆ. ದೇಹದ ಜೊತೆಗೆ ಮನಸ್ಸನ್ನು ಶುದ್ಧಿಗೊಳಿಸಲು ಶ್ರೀ ರವಿಶಂಕರ ಗುರುಜಿಯವರು ಸುದರ್ಶನ ಕ್ರಿಯೆಯನ್ನು ಜಗತ್ತಿನಾದ್ಯಂತ ಪ್ರಚುರಗೊಳಿಸಿದರು. ಆರ್ಟ್ ಆಫ್ ಲೀವಿಂಗ್ ವತಿಯಿಂದ ದೇಹ, ಮನಸ್ಸು, ಬುದ್ಧಿ ಹಾಗೂ ಪ್ರಾಣದ ಕಡೆಗೆ ಹೇಗೆ ಹೆಚ್ಚು ಗಮನ ಕೊಡಬಹುದು ಎಂದು ತಿಳಿಸಲಾಗುತ್ತದೆ ಎಂದರು.

ಆರು ದಿನಗಳ ಕಾಲ ಸುಮಾರು 30 ಶಿಬಿರಾರ್ಥಿಗಳಿಗೆ ಸುದರ್ಶನ ಕ್ರಿಯೆ ಕಲಿಸಿಕೊಟ್ಟು ಮಾತನಾಡಿದ ಯೋಗ ಶಿಕ್ಷಕಿ ಸಿದ್ದಮ್ಮ ಅವರು, ದಿನದ ಒಂದಿಷ್ಟು ಸಮಯ ನಮಗಾಗಿ ಸಮಯವನ್ನು ಮೀಸಲಿಡಬೇಕು. ಯೋಗ, ಪ್ರಾಣಾಯಾಮ ಸೇರಿದಂತೆ ಕೆಲಹೊತ್ತು ದೈಹಿಕ ಕಸರತ್ತು ನಡೆಸಬೇಕು. ಆಧ್ಯಾತ್ಮದಿಂದ ಮಾತ್ರ ಮನಸ್ಸನ್ನು ನಿಯಂತ್ರಿಸಲು ಸಾಧ್ಯ ಎಂದು ತಿಳಿಸಿದರು.

ಯೋಗ, ಆಧ್ಯಾತ್ಮಿಕತೆ, ಸನಾತನ ಧರ್ಮದ ಪರಂಪರೆಯನ್ನು ಉಳಿಸಿ ಬೆಳೆಸಲು ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ವಾಮನರಾವ ದೇಶಪಾಂಡೆ ಕರೆ ನೀಡಿದರು. ನಿವೃತ್ತ ಉಪನ್ಯಾಸಕ ನರಸಿಂಹರಾವ ಕುಲಕರ್ಣಿ ಯೋಗಾರ್ಥಿಗಳನ್ನು ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಸಂಜೀವರಾವ ಕುಲಕರ್ಣಿ, ಜಯಶ್ರೀ ಹಿರೇಮಠ, ನವೀನ, ಸಿಎಚ್ ಶ್ರೀನಿವಾಸ, ರಾಘವೇಂದ್ರ, ಆಂಜನೇಯ, ಪ್ರಭು ಅಂಗಡಿ, ಗುಡದಯ್ಯ ದಾವಣಗೇರಿ, ದೇವು ಯಾಳಗಿ, ಸತೀಶ, ಮಂಜುನಾಥ, ಶಿವರಾಜ ಬೂದುರ, ವೀರಣ್ಣ ಕಲಕೇರಿ, ಯಂಕನಗೌಡ ಪಾಟೀಲ, ವಿಜಯಾಚಾರ್ಯ ಪುರೋಹಿತ, ಬಲಭೀಮರೆಡ್ಡಿ ಡಿಗ್ಗಾವಿ, ಶಿವಾನಂದಸ್ವಾಮಿ ಹಿರೇಮಠ, ಮಲ್ಲನಗೌಡ ಪಾಟೀಲ, ರಮೇಶ ಅಂಗಡಿ, ಸುಜಾತಾ. ಎನ್, ವೆಂಗಮಾಂಬಾ ಶ್ರೀನಿವಾಸ, ಕಲ್ಪನಾ ನವೀನ, ಡಿ.ಸಿ.ಪಾಟೀಲ, ಮೋಹನರೆಡ್ಡಿ ಡಿಗ್ಗಾವಿ, ರೇವಣಸಿದ್ದಯ್ಯ ಇತರರು ಇದ್ದರು.

ಮೃತ ಕಾರ್ಯಕರ್ತೆ ಕುಟುಂಬಕ್ಕೆ 5 ಲಕ್ಷ ನೆರವು

• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಉಪ ಚುನಾವಣೆ ಕಾಲಕ್ಕೆ ನಡೆದ ಕಾಂಗ್ರೆಸ್ ಮೆರವಣಿಗೆ ಸಂದರ್ಭದಲ್ಲಿ ಅಕಾಲಿಕ ಮರಣ ಹೊಂದಿದ ವಾಂಬೆ ಕಾಲೋನಿ ಪಕ್ಷದ ಕಾರ್ಯಕರ್ತೆ ಫಾತಿಮಾ ತುಪ್ಪದ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಉಮೇಶ ಮೇಟಿ 5 ಲಕ್ಷ ರೂ. ನೆರವು ನೀಡಿದರು.

ಅಂಜುಮನ್ ಇಸ್ಲಾಂ ಸಮಿತಿ ಅಧ್ಯಕ್ಷ ಅಯೂಬ್ ಪುಣೇಕರ, ರಸೂಲಸಾಬ್ ಫೆಂಡಾರಿ, ಜಾಫರ್ ಬೆಪಾರಿ, ನಾಗರಾಜ್ ಹದ್ಲಿ , ಬುಡಾ ಅಧ್ಯಕ್ಷ ರಜಾಕ್ ಬೇನೂರ್, ಸಿಕಂದರ್ ಅಥಣಿ, ಗಾಳಿ, ಆರ್.ಎ.ಪಟ್ಟಣದ, ದ್ಯಾಮಣ್ಣ ವೈ, ವೈ.ತಿಮ್ಮಾಪುರ ಸೇರಿ ಮತ್ತಿತರರು ಇದ್ದರು.



ಖಾಸಗಿ ಜಾಗ: ಸರ್ಕಾರಿ ಕಟ್ಟಡ ತೇರವು



• ಮಲ್ಲಮ್ಮ ನುಡಿ ವಾರ್ತೆ, ಪಿರಿಯಾಪಟ್ಟಣ

ದಲಿತನ ಖಾಸಗಿ ಜಾಗದಲ್ಲಿ ಸರ್ಕಾರಿ ಕಟ್ಟಡ ತಿರುವುಗೊಳಿಸುವ ವಿಷಯವಾಗಿ ಅಗತ್ಯ ಕ್ರಮ ಕೈಗೊಂಡ ಬಗ್ಗೆ ವರದಿ ಸಲ್ಲಿಸಲು ಜಿ ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚನೆ ನೀಡಿದ್ದಾರೆ.

ತಾಲೂಕಿನ ಕಸಬಾ ಹೋಬಳಿ ಚಿಟ್ಟಿನಹಳ್ಳಿ ಗ್ರಾಮದಲ್ಲಿ ದಲಿತ ಡಿ ಚಿಕ್ಕೀರಯ್ಯ ಗೆ ಸೇರಿದ ಗ್ರಾಮ ಠಾಣಾ ಜಾಗದಲ್ಲಿ 16 ಗುಂಟೆ ವಿಸ್ತೀರ್ಣದ ಪೈಕಿ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಕಟ್ಟಡ ನಿರ್ಮಾಣ ಮಾಡುವ ಮೂಲಕ ಅನ್ಯಾಯ ವಾಗಿರುವ ಬಗ್ಗೆ ಕರ್ನಾಟಕ ದಲಿತ ಚಳುವಳಿ ನವ ನಿರ್ಮಾಣ ವೇದಿಕೆ ದೂರು ನೀಡಿತ್ತು.

ಇದನ್ನು ಪರಿಶೀಲನೆ ನಡೆಸಿರುವ ಮೈಸೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್ ಯುಕೇಶ್ ಕುಮಾರ್ ರವರು ದಲಿತ ಡಿ ಚಿಕ್ಕಿರಯ್ಯ ಬಳಿ 16 ಗುಂಟೆ ವಿಸ್ತರಣಕ್ಕೆ ಸಂಬಂಧಿಸಿದಂತೆ ಪೂರ್ಣದಾಖಲೆಗಳನ್ನು ಹೊಂದಿದ್ದು ಕೆಲವು ಪಟ್ಟಭದ್ರ ಹಿತ ಶಕ್ತಿಗಳ ಹಿನ್ನೆಲೆಯಲ್ಲಿ ಜಾಗದ ವಿಷಯವಾಗಿ ಅನ್ಯಾಯ ವಾಗುತ್ತಿರುವುದನ್ನು ಮನೆ ಗಂಡ ತಾನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದೂರು ದಾಖಲಿಸಿದರೂ ಸಹ ಕಚೇರಿ ಕಟ್ಟಡ ಕಾಮಗಾರಿ ಮುಂದುವರೆಸುತ್ತಿರುವುದನ್ನು ವಿವರಿಸಿ ವೇದಿಕೆಯು ಅವರಿಗೆ ತಿಳಿಸಿತ್ತು.

ಅಲ್ಲದೆ ಡಿ ಚಿಕ್ಕೀರಯ್ಯ ದಲಿತ ಮತ್ತು ದುರ್ಬಲ ಎಂಬುದನ್ನು ಒಬ್ಬನನ್ನೆಗುರಿಯಾಗಿರಿಸಿಕೊಂಡು ಕಟ್ಟಡದ ನಿರ್ಮಾಣಕಾಮಗಾರಿಯನ್ನು ಸ್ಥಗಿತಗೊಳಿಸಿ ಕೂಡಲೇ ತೆರವು ಮಾಡುವಂತೆ ಕರ್ನಾಟಕ ದಲಿತ ಚಳುವಳಿ ನವ ನಿರ್ಮಾಣ ವೇದಿಕೆಯ ಮುಖಂಡರಾದ ಹರಿಹರ ಆನಂದ ಸ್ವಾಮಿ ಅವರು ಕೋರಿದ್ದರು.

ಇದನ್ನೆಲ್ಲ ಪರಿಗಣಿಸಿರುವ ಜಿ ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್ ಯುಕೇಶ್ ಕುಮಾರ್ ಪಿರಿಯಪಟ್ಟಣ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಡಿಬಿ ಸುನಿಲ್ ಕುಮಾರ್ ಗೆ ಸಂಪೂರ್ಣ ವಿಷಯ ಪರಿಶೀಲಿಸಿ ಕ್ರಮ ಕೈಗೊಂಡ ಕ್ರಮದ ಬಗ್ಗೆ ತಮಗೆ ಕೂಡಲೇ ವರದಿ ಸಲ್ಲಿಸುವಂತೆ ಆದೇಶ ನೀಡಿದ್ದಾರೆ.

ಜನತಾಪುರ ಸರ್ಕಾರಿ ಶಾಲೆಯಲ್ಲಿ ಬೇಸಿಗೆ ಶಿಬಿರ



• ಮಲ್ಲಮ್ಮ ನುಡಿ ವಾರ್ತೆ, ಮುದಗಲ್

ಸಮೀಪದ ಜನತಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂಡಿಯಾ ಸುಧಾರ್ ಎಜುಕೇಶನ್ ಹಾಗೂ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ಇವರ ಸಹಯೋಗದೊಂದಿಗೆ 15 ದಿನಗಳ ಉಚಿತ ಮಕ್ಕಳ ಬೇಸಿಗೆ ಶಿಬಿರ ಕಾರ್ಯಕ್ರಮವನ್ನು ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ಮುನೀಂದ್ರಕುಮಾರ ಸಸಿಗೆ ನೀರು ಹಾಕುವ ಮೂಲಕ ಶನಿವಾರ ಉದ್ಘಾಟಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಸರ್ಕಾರಿ ಶಾಲೆಗಳಲ್ಲಿ ಈ ಉಚಿತ ಮಕ್ಕಳ ಬೇಸಿಗೆ ಶಿಬಿರ ಕಾರ್ಯಕ್ರಮ ಆಯೋಜನೆ ಮಾಡಿರುವುದು ಅತ್ಯಂತ ಸಂತಸದ ವಿಷಯವಾಗಿದೆ, ಈ 15 ದಿನಗಳಲ್ಲಿ ವಿಶೇಷ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಮಕ್ಕಳಿಗೆ ಕಲೆ, ಚಿತ್ರಕಲೆ, ಸಂಗೀತ, ವಚನ ಗಾಯನ, ಡ್ಯಾನ್ಸ್, ಸ್ಪೋಕನ್ ಇಂಗ್ಲಿಷ್ ಅಲ್ಲದೇ ಇತರೆ ಕಾರ್ಯಕ್ರಮಗಳನ್ನು ಏರ್ಪಡಿಸಿರುವುದು, ಮಕ್ಕಳಲ್ಲಿ ಪಠ್ಯ ವಿಷಯಗಳ ಜೊತೆ ಸಹ ಪಠ್ಯ ವಿಷಯಗಳ ಕಲಿಕೆಗಳ ಅನುಭವವನ್ನು ನೀಡುವುದು ಮಕ್ಕಳ ಸಂಪೂರ್ಣ ವ್ಯಕ್ತಿತ್ವ ವಿಕಸನ ಮಾಡಲು ಸಹಾಯಕವಾಗಲಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿ ಪರಿಮಳ ಗುರುಕುಲ ವಿದ್ಯಾಸಂಸ್ಥೆಯ ಮುಖ್ಯ ಗುರುಗಳು ಶೇಷಗಿರಿ ಮಾತನಾಡಿ ಮಕ್ಕಳಿಗೆ ರಜಾ ಅವಧಿಯಲ್ಲಿ ಹೊಸ ಹೊಸ ಕೌಶಲ್ಯಗಳನ್ನು ಕಲಿಯಲು, ಮಕ್ಕಳಲ್ಲಿ ಸೃಜನಾತ್ಮಕತೆ ಹೆಚ್ಚಿಸಲು ಅಲ್ಲದೇ ಆತ್ಮವಿಶ್ವಾಸ ಬೆಳೆಸಲು ಈ ಶಿಬಿರಗಳು ತುಂಬಾ ಸಹಾಯಕವಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಾಸ್ತಾವಿಕ ನುಡಿ ಶಾಲಾ ಶಿಕ್ಷಕ ಮೌನೇಶ ಎಂ ಮಾತನಾಡಿ ಇಂಡಿ–ಯಾ ಸುಧಾರ್ ಎಜುಕೇಶನ್ & ಚಾರಿಟೇಬಲ್ ಟ್ರಸ್ಟ್ ರವರ ಸಹಯೋಗದೊಂದಿಗೆ ನಿರಂತರವಾಗಿ 15 ದಿನಗಳ ಕಾಲ ನಾವು ಈ ಶಿಬಿರವನ್ನು ಹಮ್ಮಿಕೊಂಡಿದ್ದು, ಮಕ್ಕಳಿಗೆ ಪ್ರತಿನಿತ್ಯವೂ ವಿಶೇಷ ವಿಷಯಗಳನ್ನು ಬೋಧಿಸುವ ಶಿಕ್ಷಕರೊಂದಿಗೆ ಹೊಸ ಕಲಿಕೆಯ ಅನುಭವಗಳನ್ನು ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದ್ದು ಮಕ್ಕಳ ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಈ ಶಿಬಿರಗಳು ಸಹಕಾರಿ ಆಗಲಿವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷ ಶಾಲೆ ಮುಖ್ಯ ಗುರುಗಳು ಗುರುಬಸಪ್ಪ ವಹಿಸಿದ್ದರು. ಶಿಕ್ಷಕರ ಜಗದೀಶ ವಿಶ್ವಕರ್ಮ, ಜಗದೀಶ ತೊಗರಿ, ಶ್ರೀ ವೀರೇಶ ತೇರದಾಳ, ಮುತ್ತುರಾಜ ಯಾಳಗಿ ಶಿಕ್ಷಕ ಹಾಗೂ ಚಿತ್ರಕಲಾವಿ ಕೃಷ್ಣ ಶಿಬಿರದಲ್ಲಿ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅತಿಥಿ ಶಿಕ್ಷಕಿಯರಾದ ಕುಮಾರಿ ಗೀತಾ ಕಾರ್ಯಕ್ರಮ ನಿರೂಪಿಸಿದರು, ಶ್ರೀಮತಿ ಜ್ಯೋತಿ ಸ್ವಾಗತಿಸಿದರು, ಸಹ ಶಿಕ್ಷಕ ರವಿಕುಮಾರ ವಂದಿಸಿದರು.

ಶಾಲೆಯ 4 ನೇ ತರಗತಿಯಿಂದ 7 ನೇ ತರಗತಿಯ ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಪ್ರಜಾಸತ್ತಾತ್ಮಕ ಮೌಲ್ಯಗಳ ಕಾವಲುಗಾರ ಪತ್ರಕರ್ತರು: ಪತ್ರಿಕೋದ್ಯಮವೇ ನಾಲ್ಕನೇ ಸ್ತಂಭ

ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂರು ಸ್ತಂಭಗಳು ಆಡಳಿತದ ವಿವಿಧ ಭಾಗಗಳನ್ನು ನಿರ್ವಹಿಸುತ್ತವೆ. ಆದರೆ ಇವುಗಳ ಕಾರ್ಯಗಳನ್ನು ಜನತೆಗೆ ತಲುಪಿಸುವುದು ಮತ್ತು ಅವುಗಳನ್ನು ಪರಿಶೀಲಿಸುವುದು ಪತ್ರಿಕೋದ್ಯಮದ ಕರ್ತವ್ಯ. ಈ ಹಿನ್ನೆಲೆಯಲ್ಲಿ ಪತ್ರಿಕೋದ್ಯಮವನ್ನು ನಾಲ್ಕನೇ ಸ್ತಂಭ ಎಂದು ಪರಿಗಣಿಸಲಾಗುತ್ತದೆ. ಪತ್ರಿಕೋದ್ಯಮವು ಸಮಾಜದ ಕಣ್ಣು, ಕಿವಿ ಮತ್ತು ಮನಸ್ಸು. ಸತ್ಯವನ್ನು ಅನಾವರಣಗೊಳಿಸುವ ಧೈರ್ಯ, ಅನ್ಯಾಯದ ವಿರುದ್ಧ ಧ್ವನಿ ಎತ್ತುವ ನೈತಿಕತೆ, ಜನಸಾಮಾನ್ಯರ ಸಂಕಟ–ಸಂತೋಷಗಳನ್ನು ಲೋಕದ ಮುಂದೆ ತರುವ ಸೇವಾಭಾವ, ಸರ್ಕಾರದ ನೀತಿಗಳು, ಸಾಮಾಜಿಕ ಅನ್ಯಾಯಗಳು, ಅಭಿವೃದ್ಧಿಯ ಹಾದಿ ಇವೆಲ್ಲವನ್ನು ಸಮಗ್ರವಾಗಿ ವಿಶ್ಲೇಷಿಸಿ ಸಮಾಜದ ಮುಂದೆ ಇಡುವ ಜವಾಬ್ದಾರಿ ಪತ್ರಕರ್ತರದ್ದು. ಇಂತಹ ಮಹತ್ವದ ಕ್ಷೇತ್ರಕ್ಕೆ ದಿಕ್ಕು ತೋರಿಸುವ, ಚಿಂತನವೇ ಪತ್ರಕರ್ತರ ಸಮ್ಮೇಳನ ಎನ್ನಬಹುದು.

ಪತ್ರಿಕೋದ್ಯಮವೆಂದರೆ ಕೇವಲ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯವಲ್ಲ. ಅದು ಸಮಾಜದ ವಾಸ್ತವಿಕತೆಯನ್ನು ಪ್ರತಿಬಿಂಬಿಸುವ ಕಲೆ. ಜನರ ಸಮಸ್ಯೆಗಳು, ಸರ್ಕಾರದ ನೀತಿಗಳು, ಸಾಮಾಜಿಕ ಅನ್ಯಾಯಗಳು, ಅಭಿವೃದ್ಧಿಯ ಹಾದಿ ಇವೆಲ್ಲವನ್ನು ಸಮಗ್ರವಾಗಿ ವಿಶ್ಲೇಷಿಸಿ ಸಮಾಜದ ಮುಂದೆ ಇಡುವ ಜವಾಬ್ದಾರಿ ಪತ್ರಕರ್ತರದ್ದು. ಪತ್ರಿಕೋದ್ಯಮವು ಕೇವಲ ಉದ್ಯೋಗವಲ್ಲ; ಅದು ಒಂದು ಜವಾಬ್ದಾರಿ. ಸತ್ಯ, ನಿಷ್ಠೆ, ನಿಷ್ಪಕ್ಷಪಾತತೆ ಮತ್ತು ಮಾನವೀಯತೆ ಪತ್ರಕರ್ತನ ಮೂಲ ಗುಣಗಳು. ಸುದ್ದಿ ಬರೆಯುವಾಗ ವಾಸ್ತವಿಕತೆ, ಸಮತೋಲನ ಮತ್ತು ಸಮಾಜದ ಹಿತಾಸಕ್ತಿಯನ್ನ ಗಮನದಲ್ಲಿಟ್ಟುಕೊಂಡು ಖಡ್ಗವೆಂಬ ಆಯುಧವನ್ನು ಅವರು ಬಳಸುತ್ತಾರೆ.

ನಾಲ್ಕನೇ ಸ್ತಂಭದ ಪರಿಕಲ್ಪನೆ: ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂರು ಸ್ತಂಭಗಳು ಆಡಳಿತದ ವಿವಿಧ ಭಾಗಗಳನ್ನು ನಿರ್ವಹಿಸುತ್ತವೆ. ಆದರೆ ಇವುಗಳ ಕಾರ್ಯಗಳನ್ನು ಜನತೆಗೆ ತಲುಪಿಸುವುದು ಮತ್ತು ಅವುಗಳನ್ನು ಪರಿಶೀಲಿಸುವುದು ಪತ್ರಿಕೋದ್ಯಮದ ಕರ್ತವ್ಯ. ಈ ಹಿನ್ನೆಲೆಯಲ್ಲಿ ಪತ್ರಿಕೋದ್ಯಮವನ್ನು ನಾಲ್ಕನೇ ಸ್ತಂಭ ಎಂದು ಪರಿಗಣಿಸಲಾಗುತ್ತದೆ. ಪತ್ರಕರ್ತರು ಕೇವಲ ಮಾಹಿತಿ ನೀಡುವವರಲ್ಲ; ಅವರು ಸಮಾಜದ ಮಾರ್ಗದರ್ಶಕರು. ಅವರ ಕೆಲಸವು ಬಹುಮುಖವಾಗಿದೆ ಎಂದರೇ ತಪ್ಪಾಗಲಾರದು. ಪತ್ರಕರ್ತರು ಸತ್ಯವನ್ನು ಅನ್ವೇಷಿಸಿ ಜನತೆಗೆ ತಲುಪಿಸುವದು ,

ಅದರ ಜೊತೆಗೆ ಯಾವುದೇ ಪಕ್ಷಪಾತವಿಲ್ಲದೆ ಸುದ್ದಿಗಳನ್ನು ಪ್ರಕಟಿಸುವುದು, ಸಾಮಾಜದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಳ್ಳುವುದು, ಸರ್ಕಾರದ ಕಾರ್ಯಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು. ಈ ಎಲ್ಲಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಪತ್ರಕರ್ತರು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕಾಪಾಡುತ್ತಾರೆ. ಅವರ ಕಾರ್ಯ ಶ್ಲಾಘನೀಯ.

ಸರ್ಕಾರ ಮತ್ತು ಪತ್ರಿಕೋದ್ಯಮದ ಸಂಬಂಧ: ಸರ್ಕಾರದ ಕಾರ್ಯಚಟುವಟಿಕೆಗಳನ್ನು ವಿಶ್ಲೇಷಿಸಿ, ಅದರಲ್ಲಿರುವ ದೋಷಗಳನ್ನು ಬಹಿರಂಗಪಡಿಸುತ್ತಾರೆ. ಇದರಿಂದ ಸರ್ಕಾರವು ಜವಾಬ್ದಾರಿಯುತವಾಗಿ ನಡೆದುಕೊಳ್ಳಲು ಒತ್ತಡ ಉಂಟಾಗುತ್ತದೆ. ಈ ಪ್ರಕ್ರಿಯೆಯು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬಲಪಡಿಸುತ

ತೋಟಗಾರಿಕೆ ಇಲಾಖೆ ಮುಂದೆ ಧರಣಿ ಸತ್ಯಾಗ್ರಹ

• ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು:

ನಗರದ ಬೀದಿ ವ್ಯಾಪಾರಿಗಳ ಡಬ್ಬಾ ಅಂಗಡಿಗಳನ್ನು ತೆರವುಗೊಳಿಸಿ 14 ತಿಂಗಳ ಕಳೆದರೂ, ತಾಲೂಕ ಮತ್ತು ಜಿಲ್ಲಾಡಳಿತ ಪರ್ಯಾಯ ವ್ಯವಸ್ಥೆ ಕಲ್ಪಿಸಿಲ್ಲ. ಇವತ್ತು ಅ ಕುಟುಂಬಗಳು ಬೀದಿ ಪಾಲಾಗಿದ್ದಾರೆ.

ನಗರದ ಬೀದಿ ಬದಿಯ ವ್ಯಾಪಾರಸ್ಥರು ಯಾವುದೇ ಸಾವಿರಕ್ಕೂ ಹೆಚ್ಚು ಬೀದಿ ವ್ಯಾಪಾರಿಗಳು ಉದ್ಯೋಗ ವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ.

ವ್ಯಾಪಾರದಿಂದ ಉಪ ಜೀವನ ನಡೆಸುತ್ತಿದ್ದ ಸುಮಾರು ಐದು ಸಾವಿರಕ್ಕೂ ಹೆಚ್ಚು ಕುಟುಂಬಗಳು ತೀವ್ರ ಸಂಕಷ್ಟ ಅನುಭವಿಸುತ್ತಿವೆ. ನೂರಾರು ಕುಟುಂಬಗಳು ಉದ್ಯೋಗಕ್ಕಾಗಿ ಮಹಾ ನಗರಗಳಿಗೆ ಗುಳೆ ಹೋಗಿದ್ದಾರೆ.

ಸಾಲದ ಬಾಧೆಯಿಂದ 1) ಬಸವರಾಜ ತಂದೆ ನಾಗಪ್ಪ ವಯಸ್ಸು 59, 2) ರಿಯಾಜ್ ತಂದೆ ವಾಲಿ ಸಾಬ್ ವಯಸ್ಸು 22, .3) ಶೌಕತ್ ತಂ/ ಇಬ್ರಾಹಿ ಸಾಬ್ ವಯಸ್ಸು 30 ಮೂರು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗಂಗಾವತಿ ರಸ್ತೆಯ ಸಹಕಾರಿ ಸಂಘದ ಜಾಗದಲ್ಲಿ ವ್ಯಾಪಾರಕ್ಕೆ ಅನುಕೂಲ ಮಾಡುವುದಾಗಿ, ಶಾಸಕರು ಮತ್ತು ತಾಲೂಕ ಆಡಳಿತ ಕೊಟ್ಟ ಭರವಸೆ ಸುಳ್ಳಾಗಿದೆ.

ಇದಲ್ಲದೆ ಪುಟ್ಟ ಪಾತ ಮೇಲಿನ ಬಡವರ ಅಂಗಡಿ ತೆರವು ಮಾಡಿದಂತೆ, ದೊಡ್ಡ ದೊಡ್ಡ ಶ್ರೀಮಂತರ ಮತ್ತು ರಾಜಕೀಯ ಪ್ರಭಾವಿಗಳ ಅಕ್ರಮ ಕಟ್ಟಡಗಳನ್ನು ತೆರವು ಮಾಡಬಹುದಾಗಿತ್ತು.

ಈ ಹಿನ್ನೆಲೆಯಲ್ಲಿ ವ್ಯಾಪಾರಿಗಳಿಗೆ ಪುಟ್ಟ ಪಾತ ಮೇಲೆ ಪುನಃ ವ್ಯಾಪಾರ ಮಾಡಲು ಅನುಕೂಲ ಕಲ್ಪಿಸಲು ಹಾಗೂ ನಗರದ ಬಲಿಷ್ಠರ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಲು ಒತ್ತಾಯಿಸಿ, ದಿನಾಂಕ 03–01–2026 ರಂದು ಸಿಂಧನೂರಿಗೆ ಬಂದಿದ್ದ ಮಾನ್ಯ ಮುಖ್ಯಮಂತ್ರಿ ಮುಂದೆ ಪ್ರತಿಭಟನೆ ಮಾಡಲು ತೀರ್ಮಾನಿಸಲಾಗಿತ್ತು.

ಆದರೆ ಶಾಸಕರಾದ ಶಳ ಹಂಪನಗೌಡ ಬಾದರ್ಲಿ ಇವರು, ಹೋರಾಟ ಸಮಿತಿಯವರೊಂದಿಗ ಚರ್ಚಿಸಿ, ಸಮಸ್ಯೆ ಪರಿಹರಿಸುವ ವಾಗ್ದಾನ ಮಾಡಿದ್ದರಿಂದ ಪ್ರತಿಭಟನೆ ಹಿಂಪಡೆಯಲಾಗಿತ್ತು.

ದಿನಾಂಕ 06–01–2026 ರಂದು ತೋಟಗಾರಿಕೆ ಅಧಿಕಾರಿಗಳು ಸೇರಿದಂತೆ ಬೀದಿ ವ್ಯಾಪಾರಿಗಳ ಸಭೆ ನಡೆಸಿ ಸಮಸ್ಯೆ ಪರಿಹರಿಸುವ ಮಾತು ಕೊಟ್ಟಿದ್ದರು.ಆದರೆ ಇದುವರೆಗೂ ಸಭೆ ನಡೆಸಿರುವುದಿಲ್ಲ.ಇದಲ್ಲದೆ

ಜಿಲ್ಲಾಧಿಕಾರಿಗಳು ಕೂಡ ದಿನಾಂಕ 02–01–2026 ರಂದು ಸರ್ಕ್ಯೂಟ್ ಹೌಸ್ ನಲ್ಲಿ ನಮ್ಮೊಂದಿಗೆ ಚರ್ಚಿಸಿ, 15 ದಿನಗಳಲ್ಲಿ

ಅನಧಿಕೃತಕಟ್ಟಡಗಳನ್ನುತೆರವುಮಾಡುವತೀರ್ಮಾನತೆಗೆದುಕೊಳ್ಳುತ್ತೇವೆಂದು ಹೇಳಿದ್ದರು.ಇದುವರೆಗೂ ನಮ್ಮೊಂದಿಗೆ ಚರ್ಚಿಸಿಲ್ಲ ಮತ್ತು ನಮ್ಮ ಪತ್ರಕ್ಕೆ ಉತ್ತರ ದೊರೆತಿಲ್ಲ. ರಸ್ತೆಯ ಮಧ್ಯ ಭಾಗದಿಂದ 21 ಮೀಟರ್ ನಲ್ಲಿರುವ ಬಿಲ್ಡಿಂಗ್ ಗಳನ್ನು ತೆರವು ಮಾಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಿನಾಂಕ 13–04–2026 ರಂದು ಸರ್ಕಾರಿ ತೋಟಗಾರಿಕೆ ಇಲಾಖೆಯ ಮುಂದೆ ಧರಣಿ ಸತ್ಯಾಗ್ರಹ ನಡಿಸಲಾಗುತ್ತದೆ ಎಂದು ಬೀದಿ ಬದಿ ವ್ಯಾಪಾರಿಗಳ ಹೋರಾಟ ಸಮಿತಿ ಒಕ್ಕೂಟ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದರು.

ಈ ಸಂದರ್ಭದಲ್ಲಿ.ಚಿಟ್ಟಿಬಾಬು, ಬಿನ್ ಯರದಿಹಾಳ,ಬಸವರಾಜ ಬಾದರ್ಲಿ ಬಸವಂತರಾಯ ಗೌಡ, ಡಾ.ವಸಿಂ. ಮಂಜುನಾಥ್ ಗಾಂಧಿ ನಗರ,ಕಾಶಿಂ ಸಾಬ್, ಶಾಮೀದ್ ಸಾಬ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಕಾನೂನು ಮಾರ್ಗದರ್ಶನ

ಬುದ್ಧ ಬಸವ ಅಂಬೇಡ್ಕರ್ ಅವರ ಜ್ಞಾನ ವಿದ್ಯಾರ್ಥಿಗಳು ತಿಳಿದಿರಬೇಕು: ನಾಯಕ್



• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಅಹಿಂದ ವಿದ್ಯಾರ್ಥಿ ಯುವ ಜನ ಒಕ್ಕೂಟ ಸಿಂಧನೂರು ತಾಲೂಕ ರಾಯಚೂರು ಜಿಲ್ಲೆ ವತಿಯಿಂದ ಸಂವಿಧಾನಿಕ ಶಿಕ್ಷಣ ಸಾಮಾಜಿಕ ನ್ಯಾಯ ಮತ್ತು ಐಕ್ಯತೆ ಬಲಗೊಳಿಸಲು ವಿದ್ಯಾರ್ಥಿಗಳಿಗೆ ಕಾನೂನು ಮಾರ್ಗದರ್ಶನ ಕಾರ್ಯಕ್ರಮ ಈ ಕಾರ್ಯಕ್ರಮವನ್ನು ಜ್ಯೋತಿ ಬಾಪುಲೆ ಭಾವಚಿತ್ರಕ್ಕೆ ಹೂವಿನ ಹಾರ ಹಾಕುವ ಮೂಲಕ ಉದ್ಘಾಟನೆ ಮಾಡಿ ಹಿರಿಯರು ವಕೀಲರಾದ ರಾಯಪ್ಪ ಜೆ ಕಾನೂನು ಯಾವ ರೀತಿ ಪಾಲನೆ ಮಾಡಬೇಕು ವಿದ್ಯಾರ್ಥಿಗಳ ಶಿಸ್ತು ಶಿಕ್ಷಣ ಅಭಿವೃದ್ಧಿ ಕುರಿತು ತಿಳಿಸಿದರು

ನಂತರ ಮಾತನಾಡಿದ ಡಿವೈಎಸ್ಪಿ ಚಂದ್ರಶೇಖರ್ ನಾಯಕ್ ಅವರು ಸೈಬರ್ ಕ್ರೈಮ್ ಮತ್ತು ಸಾಮಾಜಿಕ ಜಾಲತಾಣ ಹೇಗೆ ನಿರ್ವಯಿಸಬೇಕು ವಿದ್ಯಾರ್ಥಿಗಳಿಗೆ ಬುದ್ಧ ಬಸವಣ್ಣ ಅಂಬೇಡ್ಕರ್ ರವರ ಜ್ಞಾನ ನಮ್ಮಲ್ಲಿ ಆಳವಾಗಿ ಇರಬೇಕು ವಚನಕರರು ನಮಗೆ ಆದರ್ಶ ಸಂತ ಶುಶುನಳಾ ಶರೀಫ್ ಅಜ್ಜರ ತತ್ವಪದಗಳ ಕುರಿತು ಸಾಮ್ರಾಟ್ ಅಶೋಕರ ಚರಿತ್ರೆ ಕಾರ್ಲ್ ಮಾರ್ಕ್ ಹಳೆಯ ಇತಿಹಾಸವನ್ನು ಎಲ್ಲರಿಗೆ ಸ ವಿವರವಾಗಿ ತಿಳಿಸಿದರು ಮತ್ತು ವೀರೇಶ್ ಉಪ್ಪಲದೊಡ್ಡಿ ಮಾತಾಡಿ ಮಹಿಳಾ ಸುರಕ್ಷತ ಜಾಗೃತಿ ಮತ್ತು ವಿದ್ಯಾರ್ಥಿಗಳ ಕುರಿತು ತಿಳಿಸಿದರು ಪ್ರವೀಣ್ ದುಮತಿ ಹಿರಿಯರ ಮಾರ್ಗದರ್ಶನ ಮಹನೀಯರ ಹಾದಿ ಅಚ್ಚುಕಟ್ಟಾಗಿ ಪಾಲಿಸುವಂತೆ ಕಾನೂನು ರೀತಿ ನೀತಿಗಳನ್ನು ತಿಳಿದುಕೊಳ್ಳುವಂತೆ ಮನವಿ ಮಾಡಿದರು ಉಮೇಶ್ ಅವರು ಅನುಚ್ಛೇದ 19 /21 / ಶಿಕ್ಷಣ ಉದ್ಯೋಗದ ಕುರಿತು ಜಾಗೃತಿ ಮೂಡಿಸಿದರು

ಈ ಕಾರ್ಯಕ್ರಮದಲ್ಲಿ ಆಜಖಕ ಚಂದ್ರಶೇಖರ,ರಾಯಪ್ಪ ವಕೀಲರು,ಎಸ್ ಎಸ್ ಜಿನೂರು ಪತ್ರಕರ್ತರು,ವೆಂಕಟೇಶ್ ಗಿರಿಜಾಲಿ ದಲಿತ ಮುಖಂಡರು ವಿರೇಶ್ ಉಪ್ಪಲದೊಡ್ಡಿ ಪ್ರಾಂಶುಪಾಲಾರದ ಮಂಜುನಾಥ್ ಸೋಮಲಾಪುರ, ಪದವಿ ವಿಭಾಗ ಎಂ ವೆಂಕರಾವ್ ಖಾಸಿಂ ಖುರೆಸಿ ಉಪನ್ಯಾಸಕರು ಪ್ರವೀಣ್ ದುಮತಿ ಉಮೇಶ್, ಬಸವರಾಜ್ ಯಾಪಲಪರ್ವಿ ಸುರೇಶ ಇತರರು ಇದ್ದರು.

ಸಾಂಪ್ರದಾಯಿಕ ಉಡುಗೆ ಸ್ಪರ್ಧೆ ಉತ್ಸಾಹದಿಂದ ಪಾಲ್ಗೊಂಡ ವಿದ್ಯಾರ್ಥಿ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್. ಆರ್.ನರಸಾಪೂರ ಕಲಾ ಮತ್ತು ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ವಾರ್ಷಿಕೋತ್ಸವದ ನಿಮಿತ್ತ ಶನಿವಾರ ಆಯೋಜಿಸಿದ್ದ ಸಾಂಪ್ರದಾಯಕ ಉಡುಗೆ ಸ್ಪರ್ಧೆಯಲ್ಲಿ ಬಣ್ಣ–ಬಣ್ಣದ ಪೋಷಾಕಿನಲ್ಲಿ ಅನೇಕ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು.

ವಿವಿಧತೆಯಲ್ಲಿ ಏಕತೆ ಎಂಬಂತೆ ದೇಶದ ವಿವಿಧ ರಾಜ್ಯಗಳ ಸಾಂಪ್ರದಾಯಕ ಉಡುಗೆಯಲ್ಲಿ ಹೆಜ್ಜೆ ಹಾಕಿ ಗಮನ ಸೆಳೆದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಾಚಾರ್ಯ ಶ್ರೀನಿವಾಸ ನರಗುಂದ, ಲವಲವಿಕೆ ಜೀವಂತಿಕೆಯ ಲಕ್ಷಣ. ಉತ್ಸಾಹದಿಂದ ಪಾಲ್ಗೊಳ್ಳುವಿಕೆ ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಪಠ್ಯದ ಜೊತೆಗೆ ಲಲಿತಕಲೆಗಳೂ ಪ್ರಮುಖ ಪಾತ್ರವನ್ನು ವಹಿಸುವದರಿಂದ ವಿದ್ಯಾರ್ಥಿಗಳು ಇವುಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

ಎಸ್.ಎಂ ಜೇವೂರ ನಿರೂಪಿಸಿದರು. ಉಪನ್ಯಾಸಕರಾದ ಕೀರ್ತಿ ದಾಸರ, ಗೀತಾ ಕಿಲಬನೂರ, ಎ.ಎ.ಗಂಗಲ್, ಎಸ್.ವಾಯ್.ಬೊಮ್ಮಣ್ಣವರ ಇದ್ದರು.

ಆರೋಗ್ಯಕರ ಜೀವನ ಶೈಲಿಗೆ ವ್ಯಾಯಾಮ ಅವಶ್ಯ: ಶಾಂತಾ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ತಾಲ್ಲೂಕಿನ ಕಲಾದಗಿ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಆರೋಗ್ಯ ಸಪ್ತಾಹದ ಅಂಗವಾಗಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕಲಾದಗಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಮಂಜುನಾಥ ಚನಗೊಂಡ ಮತ್ತು ಶಾಂತಾ ಚೌಧರಿ ಮಾತನಾಡಿ,

ಆರೋಗ್ಯಕರ ಜೀವನಶೈಲಿಗೆ ನಿಯಮಿತ ವ್ಯಾಯಾಮ, ಸಮತೋಲನ ಆಹಾರ ಮತ್ತು ಮಾನಸಿಕ ಸಮತೋಲನದ ಅಗತ್ಯತೆಯ ಕುರಿತು ವಿವರವಾಗಿ ಉಪನ್ಯಾಸ ನೀಡಿದರು.

ವಿದ್ಯಾರ್ಥಿಗಳಿಗೆ ಒತ್ತಡ ನಿರ್ವಹಣೆಗೆ ಯೋಗ ಮತ್ತು ಧ್ಯಾನ ಸಹಕಾರಿಯಾಗಬಲ್ಲದು ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಎಚ್.ಬಿ. ಮಹಾಂತೇಶ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಅತ್ಯಂತ ಮುಖ್ಯವಾಗಿದ್ದು, ಶಿಸ್ತಿನೊಂದಿಗೆ ಆರೋಗ್ಯಕರ ಜೀವನಶೈಲಿಯನ್ನು ಪಾಲಿಸಿದರೆ ಯಶಸ್ಸು ಸಾಧಿಸಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಆಶಯ ನುಡಿ ಹೇಳಿದ ಸಹಾಯಕ ಪ್ರಾಧ್ಯಾಪಕ ಡಾ. ಯಲ್ಲಪ್ಪ, ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ಸಮತೋಲನವೇ ಸಮಗ್ರ ವ್ಯಕ್ತಿತ್ವದ ನಿರ್ಮಾಣಕ್ಕೆ ಅಗತ್ಯ, ವಿದ್ಯಾರ್ಥಿಗಳು ದಿನನಿತ್ಯದ ಜೀವನದಲ್ಲಿ ಆರೋಗ್ಯಕರ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ಚರ್ಚೆ ನಡೆಯಿತು. ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಿ ಸ್ಪಷ್ಟನೆ ಪಡೆದರು.ಡಾ.ಲೋಕಣ್ಣ ಭಜಂತ್ರಿ ಸ್ವಾಗತಿಸಿದರು. ಡಾ. ಪುಂಡಲೀಕ ಹುನ್ನಳ್ಳಿ ನಿರೂಪಿಸಿದರು. ಡಾ. ಕೆ.ಎಂ. ಸಾರವಾನ ವಂದಿಸಿದರು.

ಸ್ವಾತಿ ತಳವಾರ ಪ್ರಾರ್ಥಿಸಿದರು. ವಿದ್ಯಾ ದಂಡಗಿ, ರಂಗಪ್ಪ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂಘವು ಅಕ್ರಮವಾಗಿ ಚುನಾವಣೆ ನಡೆಸಲು ಮುಂದಾಗಿದೆ: ನಾಗನಗೌಡ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ



ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಬೆಂಕಿ ಹಚ್ಚುವ ಕೆಲಸ ಮಾಡುತ್ತಿದೆ. ಮತ್ತು ಇಡೀ ರಾಜ್ಯಾಧ್ಯಂತ ಅಕ್ರಮವಾಗಿ ಚುನಾವಣೆ ನಡೆಸಲು ಮುಂದಾಗಿದೆ ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿ ನಾಗನಗೌಡ ಎಂ.ಎ ಆರೋಪಿಸಿದರು.

ಅವರು ಶನಿವಾರ ಪಟ್ಟಣದ ಎಸ್.ಎನ್.ಪೇಟೆ ಶಾಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಚುನಾವಣೆ ಬಹಿಷ್ಕಾರದ ವೇಳೆ ಮಾತನಾಡಿ, ಅನ್ಯಾಯದ ವಿರುದ್ಧ ಪ್ರತಿಭಟಿಸುವುದು ಪ್ರತಿಯೊಬ್ಬರ ಹಕ್ಕಾಗಿದೆ. ನಾನೊಬ್ಬ ರಾಜ್ಯ ಪದಾಧಿಕಾರಿಯಾಗಿದ್ದು, ನಮ್ಮ ಮೇಲೆ ರಾಜ್ಯ ಸಂಘದಿಂದ ಯಾವಾಗಲು ಕಣ್ಣಿತ್ತು.

ಇವತ್ತು ಮತ್ತು ನಾಳೆ ಎರಡು ದಿನ ಸಂಘದ ಚುನಾವಣೆಗೆ ನಾಮಪತ್ರಸಲ್ಲಿಸಲು ಅವಕಾಶವಿದೆ. ಇವತ್ತಿನವರೆಗೂ ಕಂಪ್ಲಿಯಲ್ಲಿ ಚುನಾವಣಾ ಕಛೇರಿ ಆರಂಭವಾಗಿಲ್ಲ.

ಚುನವಣಾ ಮತದಾರರ ಪಟ್ಟಿ ಇಲ್ಲ. ಕಂಪ್ಲಿ ತಾಲೂಕಿನಲ್ಲಿ 113 ಜನ ಶಿಕ್ಷಕರಿದ್ದಾರೆ. ಇದರಲ್ಲಿ ಎರಡು ಪುರುಷ ಮತ್ತು ಒಂದು ಮಹಿಳಾ ಪದಾಧಿಕಾರಿಗಳ ಹುದ್ದೆ ಬರುತ್ತದೆ. ಆದರೆ, ಈ ಚುನಾವಣೆಯಲ್ಲಿ ಬೆಂಕಿ ಹಚ್ಚುವ ಕೆಲಸವನ್ನು ರಾಜ್ಯ ಸಂಘ ಮಾಡಿದೆ. ಯಾರನ್ನು ಮತದಾರರ ಪಟ್ಟಿಯಿಂದ ತೆಗೆದರೆ, ಏನು ಮಾಡಿಕೊಳ್ಳುತ್ತಾರೇ ಎಂಬುವ ಉಡಾಫೆ ಪ್ರವೃತಿಯನ್ನು ಹೊಂದಿದೆ. ಆದ್ದರಿಂದ ಶಿಕ್ಷಕರು ರಾಜ್ಯ ಸಂಘಕ್ಕೆ ತಿರುಗೇಡು ನೀಡುವ ಸಮಯ ಬಂದಿದೆ. ಮತ್ತು ಮುಂದಿನ ದಿನದಲ್ಲಿ ರಾಜ್ಯ ಸಂಘಕ್ಕೆ ತಕ್ಕ ಉತ್ತರ ನೀಡಲಿದ್ದೇವೆ.

ಬಳ್ಳಾರಿ ನಗರದಲ್ಲಿ 1400 ಶಿಕ್ಷಕರಿದ್ದರೂ, ಚುನಾವಣೆ ನಡೆಯುತ್ತಿಲ್ಲ. ಇಲ್ಲಿ ಯಾವುದೇ ಮತದಾರರ ಪಟ್ಟಿಕೊಟ್ಟಿಲ್ಲ. ಬಳ್ಳಾರಿ ಸೇರಿದಂತೆ ರಾಜ್ಯದ ಮಂಡ್ಯ, ಚಾಮರಾಜನಗರ, ಅರಸಿಕೇರಿ, ಉಡುಪಿಯಲ್ಲಿ ಚುನಾವಣೆ ಇಲ್ಲದಂತಾಗಿದೆ. ರಾಜ್ಯದ 50ಕ್ಕೂ ಹೆಚ್ಚು ತಾಲೂಕುಗಳು ದುಸ್ಥಿತಿಯಲ್ಲಿವೆ. ನಮ್ಮ ಹೆಸರು ತೆಗೆದಿರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಮತದಾರರ ಪಟ್ಟಿಯಲ್ಲಿ 50–100 ಶಿಕ್ಷಕರ ಹೆಸರುಗಳನ್ನು ಮಂಗಮಾತ ಮಾಡಿದ್ದಾರೆ. ಕಂಪ್ಲಿಯಲ್ಲಿ ನಮ್ಮದು ಮತ್ತು ಹಿರಿಯ ಶಿಕ್ಷಕರ ಹೆಸರು ತೆಗೆದು ಹಾಕಿದ್ದಾರೆ.

ಆದರೆ, ಕಂಪ್ಲಿಯಲ್ಲಿ ಮತದಾರರ ಪಟ್ಟಿಯಲ್ಲಿ ಶಿಕ್ಷಕರ ಹೆಸರು ತೆಗೆದಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ಇಧಿಂದ ಶಿಕ್ಷಕರೆಲ್ಲರೂ ಒಗ್ಗಟ್ಟಾಗಿದ್ದು, ಯಾವುದೇ ಶಿಕ್ಷಕರಿಗೆ ಅನ್ಯಾಯವಾಗಬಾರದೆಂಬ ಸಂದೇಶವನ್ನು ಸಾರಿದ್ದಾರೆ.

ಪ್ರತಿ ವರ್ಷ ಸಂಘಕ್ಕೆ 200 ರೂ.ಗಳನ್ನು ಕಟ್ಟುತ್ತಿದ್ದೇವೆ. ಈ ಮತದಾರರ ಪಟ್ಟಿಯಲ್ಲಿ ಯಾರೆಲ್ಲಾ ಹೆಸರನ್ನು ಬಿಟ್ಟಿದ್ದಾರೋ ಅವರೆಲ್ಲರೂ ಚುನಾವಣೆ ಕೂಡಿಕೊಂಡು ಭಾನುವಾರ ಸಿವಿಲ್ ಕೋರ್ಟ್ ಮೊರೆ ಹೋಗಲಿದ್ದೇವೆ. ಇಡೀ ರಾಜ್ಯಾದ್ಯಂತ ಚುನಾವಣೆ ಅಕ್ರಮವಾಗಿದ್ದು, ನ್ಯಾಯಾಲಯದ ಸುಪರ್ದಿಯಲ್ಲಿ ಕೇಸ್ ನಡೆಯುತ್ತಿರುವುದಿಂದ ಈ ಪ್ರಕರಣಕ್ಕೆ ನ್ಯಾಯ ಸಿಗುವ ವಿಶ್ವಾಸದ ಜೊತೆಗೆ ಗಟ್ಟಿಯಾಗುತ್ತದೆ. ನ್ಯಾಯಯುತ ಚುನಾವಣೆ ನಡೆಸುವವರೆಗೂ ಕಂಪ್ಲಿಯಲ್ಲಿ ಚುನಾವಣೆ ಬಾಯ್ಕಟ್ ಮಾಡಲಾಗುತ್ತದೆ. ಸಂಘದ ಕೊಂಡಿಯಾಗಿ ಶಿಕ್ಷಕರು ನಿಂತಿದ್ದಾರೆ. ಆದರೆ, ಸಂಘವಿರುವುದು ದುಡ್ಡು ಹೊಡೆಯುವದಕ್ಕಲ್ಲ ಎಂದರು.

ಈ ಸಂದರ್ಭದಲ್ಲಿ ಸಹ ಶಿಕ್ಷಕರಾದ ರಾಜಶೇಖರ,ಎಚ್.ಪಿ.ಸೋಮಶೇಖರ, ರುದ್ರಪ್ಪ ವಸಂತಕುಮಾರ, ಪ್ರಭಕರ, ರೇವಣ್ಣಸಿದ್ದೇಶ,

ಚನ್ನಬಸಪ್ಪ, ಸುನೀತ, ಪೂಜಾ, ಮರಿಸ್ವಾಮಿ, ನಾಗರತ್ನ, ಲತಾ ಸೇರಿ ಅನೇಕ ಶಿಕ್ಷಕರಿದ್ದರು.

ಪಿಯುಸಿ ವಿಜ್ಞಾನದಲ್ಲಿ ವಿಭಾಗಲ್ಲಿ 97.33%; ಕುಟುಂಬದಿಂದ ಹರ್ಷ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಯಾದಗಿರಿ ತಾಲೂಕಿನ ಕಡೇಚೂರು ಗ್ರಾಮದ ಆಂಜನೇಯ ಮತ್ತು ಕಮಲಮ್ಮ ದಂಪತಿಯ ಸುಪುತ್ರಿಯಾದ ಕುಮಾರಿ ಪ್ರಿಯದರ್ಶಿನಿ ರವರು ಪಿಯುಸಿ ವಿಜ್ಞಾನ ವಿಭಾಗದಲ್ಲಿ 600 ಕ್ಕೆ 584 ಅಂಕ ಪಡೆದು 97.33% ಪ್ರತಿಶತ ಪಡೆದು ತಾಲೂಕು ಮತ್ತು ಗ್ರಾಮಕ್ಕೆ ಕೀರ್ತಿ ತಂದಿದ್ದಾಳೆ. ಕನ್ನಡ 100/95. ಇಂಗ್ಲಿಷ್ 100/92. ಭೌತಶಾಸ್ತ್ರ 100/100. ರಸಾಯನಶಾಸ್ತ್ರ 100/97. ಗಣಿತ 100/100

ಜೀವಶಾಸ್ತ್ರ 100/100 ಒಟ್ಟಾರೆಯಾಗಿ 600/584(97.33%) ಅಂಕಗಳನ್ನು ಪಡೆದಿದ್ದಾಳೆ. ಪ್ರಿಯದರ್ಶಿನಿಯವರು ಹತ್ತನೇ ತರಗತಿಯನ್ನು ತಾಲೂಕಿನ ಸೈದಾಪುರದ ಶ್ರೀ ಭಗವಾನ ಮಹಾವೀರ ಪ್ರೌಢ ಶಾಲೆಯಲ್ಲಿ ಮುಗಿಸಿ, ಪ್ರಸ್ತುತ ಪಿಯುಸಿಯನ್ನು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟದ ಆಕ್ಷರ್ಡ್ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದು, ಮಗಳ ಸಾಧನೆಗೆ ಗ್ರಾಮದ ಜನರು, ಮತ್ತು ಸಮಾಜದ ವತಿಯಿಂದ ಹಾಗೂ ರಾಜ್ಯ ಮಟ್ಟದ ಭಗೀರಥ ಉಪ್ಪಾರ ಸಮಾಜದ ಪ್ರಧಾನ ಕಾರ್ಯದರ್ಶಿ–2ಗಳಾದ ಶ್ರೀ ಬನ್ನಪ್ಪ ಹುಲಿಬೆಟ್ಟರವರು ಸೊಸೆಯ (ತಂಗಿ ಮಗಳು) ಸಾಧನೆಗೆ ಹರ್ಷವನ್ನು ವ್ಯಕ್ತ ಪಡಿಸಿದ್ದಾರೆ.

ಮಧ್ಯರಾತ್ರಿ ಹಂದಿ ಕಳ್ಳತನ ದೂರು ದಾಖಲು

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ತಂಡವೊಂದು ಮಧ್ಯರಾತ್ರಿ ಹಂದಿಗಳ ಕಳ್ಳತನಕ್ಕೆ ಇಳಿದಿರುವ ಬಗ್ಗೆ ಗೊತ್ತಾಗಿದ

ಮೊರಾರ್ಜಿ ದೇಸಾಯಿ ವಸತಿ 6ನೇ ತರಗತಿಗೆ ಪ್ರವೇಶ ಪರೀಕ್ಷೆ



ಬಳ್ಳಾರಿ: ಕಂಪ್ಲಿ ತಾಲೂಕಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ 6ನೇ ತರಗತಿಯ ಪ್ರವೇಶ ಪರೀಕ್ಷೆ 96 ವಿದ್ಯಾರ್ಥಿಗಳ ಪೈಕಿ 85 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ 11 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಎಂದು ಪ್ರಾಂಶುಪಾಲರು ಬಸವರಾಜ್ ಅವರು ಮಾಹಿತಿ ತಿಳಿಸಿದರು. ಪರೀಕ್ಷೆ ಕೇಂದ್ರ ಸುತ್ತಲೂ ಪೊಲೀಸ್ ಬಿಗಿ ಭದ್ರತೆ ಹಾಗೂ ಯಾವುದೇ ರೀತಿ ತೊಂದರೆ ಹಾಗಲಾರದಂಗೆ ಪರೀಕ್ಷೆ ನಡೆಸಲಾಗುವುದು ಎಂದು ಮಾಹಿತಿ ತಿಳಿಸಿದರು.

ತಲೆ ಮರೆಸಿಕೊಂಡಿದ್ದ ಆರೋಪಿಯ ಬಂಧನ



ವಿಜಯಪುರ: ಜಿಲ್ಲೆಯ ಆಲಮೇಲ್ ಪೊಲೀಸ್ ಠಾಣೆ ಗುನ್ನಾ ನಂ: 35/2002 ಕಲಂ: 302, 201 ಐಪಿಸಿ (ಎಸ್ಸಿ ನಂ: 102/2002) ಪ್ರಕರಣದಲ್ಲಿ ದಿನಾಂಕ: 20.11.2003 ರಂದು ಪ್ರಕರಣದ ಆರೋಪಿ ಆಜಾನ್ ಹುಸೇನ್ ಮುಜಾವರ @ ಶೇಖ, ಸಾ: ವಾಗೋಲಿ ತಾ: ಮೋಹೊಳ ಜಿಲ್ಲಾ: ಸೊಲ್ಹಾಪೂರ ಮಹಾರಾಷ್ಟ್ರ, ಈತನಿಗೆ ಮಾನ್ಯ ಪ್ರಧಾನ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿ, ತೀರ್ಪು ನೀಡಿದ್ದು, ಸದರಿ ಆರೋಪಿತನು ಮಾನ್ಯ ನ್ಯಾಯಾಂಗ ಬಂಧನದಲ್ಲಿದ್ದಾಗ, ವಿಜಯಪುರ ಕೇಂದ್ರ ಕಾರಾಗೃಹದಿಂದ ದಿನಾಂಕ: 25.03.2005 ರಂದು 10 ದಿನಗಳ ಪೆರೋಲ್ ರಜೆ ಪಡೆದು, ತನ್ನ ಊರಿಗೆ ಹೋಗಿದ್ದು, ಪೆರೋಲ್ ರಜೆ ಅವಧಿ ಮುಗಿದ ಮೇಲೆ ಮರಳಿ ಹಾಜರಾಗದೇ, ತಲೆಮರೆಸಿಕೊಂಡು ಹೋಗಿರುತ್ತಾನೆ . ಈ ಬಗ್ಗೆ ಮಹಾರಾಷ್ಟ್ರ ರಾಜ್ಯದ ಸೊಲ್ಹಾಪೂರ ಜಿಲ್ಲೆಯ ಕಾಮತಿ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ: 26/2014 ಕಲಂ: 224, 225 ಐಪಿಸಿ ಅಡಿಯಲ್ಲಿ ಪ್ರಕರಣದ ದಾಖಲಾಗಿರುತ್ತದೆ.

ಕಳೆದ 21 ವರ್ಷಗಳಿಂದ ತಲೆ ಮರೆಸಿಕೊಂಡಿದ್ದ ಶಿಕ್ಷಾಬಂಧಿ ಆರೋಪಿತನ ಪತ್ತೆ ಕುರಿತು ವಿಜಯಪುರ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಮತ್ತು ರಾಮನಗೌಡ ಹಟ್ಟಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ವಿಜಯಪುರ ರವರ ಮಾರ್ಗದರ್ಶನದಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆಯ ಶ್ರೀ ರವಿ ಯಡವನ್ನವರ, ಪಿ.ಐ, ಶ್ರೀ ರಾಕೇಶ ಬಗಲಿ, ಪಿ.ಎಸ್.ಐ ಹಾಗೂ ಸಿಬ್ಬಂದಿಗಳ ಒಳಗೊಂಡ ವಿಶೇಷ ತನಿಖಾ ತಂಡ ರಚಿಸಿ , ಸದರಿ ವಿಶೇಷ ತಂಡವು ಆರೋಪಿತನ ಇರುವಿಕೆಯ ಬಗ್ಗೆ ಮಾಹಿತಿ ಕಲೆ ಹಾಕಿ, ದಿನಾಂಕ: 11.04.2026 ರಂದು ಮಹಾರಾಷ್ಟ್ರ ರಾಜ್ಯದ ಇಚಲಕರಂಜಿ ಪಟ್ಟಣದಲ್ಲಿ ವಶಕ್ಕೆ ಪಡೆದು, ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ, ಮರಳಿ ಕೇಂದ್ರ ಕಾರಾಗೃಹಕ್ಕೆ ಒಪ್ಪಿಸಿದ್ದಾರೆ. ಸದರಿ ಶಿಕ್ಷಾಬಂಧಿ ಆರೋಪಿತನ ಕುರಿತು ಮಾಹಿತಿ ಸಂಗ್ರಹಿಸಿ, ಆತನನ್ನು ಪತ್ತೆ ಹಚ್ಚಿ, ಬಂಧಿಸುವಲ್ಲಿ ಉತ್ತಮ ಕರ್ತವ್ಯ ನಿರ್ವಹಿಸಿದ ವಿಜಯಪುರ ಸೈಬರ್ ಕ್ರೈಂ ಪೊಲೀಸ್ ಠಾಣೆ–ಯ ಅಧಿಕಾರಿ ಹಾಗೂ ಸಿಬ್ಬಂದಿ ಜನರ ಕರ್ತವ್ಯವನ್ನು ಪೋಲಿಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಶ್ಲಾಘಿಸಿದ್ದಾರೆ.

ಸಂಕಲ್ಪ ಕಾಲೇಜಿನ ಶೇ90 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ



ಗಂಗಾವತಿ: ನಗರದ ಸಂಕಲ್ಪ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪಿಯುಸಿ ದ್ವಿತೀಯ ವರ್ಷದ ಮಾರ್ಚ್ 2026 ರ ವಾರ್ಷಿಕ ಪರೀಕ್ಷೆ ಫಲಿತಾಂಶದಲ್ಲಿ ಶೇಕಡಾ 90% ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ಅಮೋಘ ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಅಮೋಘಗೌಡ ತಂದೆ ಸೂರ್ಯ ಪ್ರಕಾಶಗೌಡ 582, (97%)., ಜಿ ನಿಶ್ಚಿತಾ ತಂದೆ ರಾಘವೇಂದ್ರ 568 (94.67%)., ದ್ರಾಕ್ಷಾಯಿಣಿ ತಂದೆ ರಾಮಣ್ಣ 558 (93%), ಅದೇರೀತಿ ಕಲಾ ವಿಭಾಗದಲ್ಲಿ ಅಕ್ಷೀತಾ ತಂದೆ ಆನಂದ 573 (95.50%), ಚೈತ್ರ ತಂದೆ ಭಿಮಣ್ಣ 572 (95.33%), ವೀರಭದ್ರಪ್ಪ ತಂದೆ ಸೊಮಪ್ಪ 567 (94.50%) ಈ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೆ–ರ್ಗಡೆಯಾಗಿದ್ದು, 32 ಕ್ಕಿಂತ ಅಧಿಕ ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಹಾಗೂ 11 ವಿದ್ಯಾರ್ಥಿಗಳು ವಿಷಯವಾರು 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ.

ಒಟ್ಟು 220 ವಿದ್ಯಾರ್ಥಿಗಳಲ್ಲಿ 200 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು. ಉನ್ನತ–ಶ್ರೇಣಿಯಲ್ಲಿ–57, ಪ್ರಥಮ ದರ್ಜೆಯಲ್ಲಿ–121, ದ್ವಿತೀಯ ದರ್ಜೆಯಲ್ಲಿ–20, ತೃತೀಯ ದರ್ಜೆಯಲ್ಲಿ–02 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

ಕಾನಿಪ ಸಂಘದ 40ನೇ ರಾಜ್ಯ ಸಮ್ಮೇಳನಕ್ಕೆ ತೆರೆ

ಪತ್ರಕರ್ತರು ಸತ್ಯದ ಪರವಾಗಿರಬೇಕು: ಸಭಾಧ್ಯಕ್ಷ ಯು. ಟಿ. ಖಾದರ್ ಸಲಹೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಪತ್ರಿಕೋದ್ಯಮವು ಸಾಮಾಜಿಕ ಜವಾಬ್ದಾರಿಯ ಪ್ರತೀಕವಾಗಿದೆ ಎಂದು ವಿಧಾನಸಭೆಯ ಸಭಾಧ್ಯಕ್ಷರಾದ ಯು ಟಿ ಖಾದರ್ ಅವರು ಹೇಳಿದರು.

ಬೀದರ ಜಿಲ್ಲೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೀದರ ಜಿಲ್ಲಾ ಘಟಕದಿಂದ ನಗರದ ಝೀರಾ ಕನ್ವೆನ್ಷನ್ ಹಾಲನಲ್ಲಿ


ಏಪ್ರಿಲ್ 12ರಂದು ನಡೆದ 40ನೇ ರಾಜ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಸಮಾಜ, ದೇಶ ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸುವ ಪತ್ರಕರ್ತರ ಪೆನ್ನು ಸದಾಕಾಲ ಸತ್ಯದ ಪರವಾಗಿರಬೇಕು ಎಂದು ಸಲಹೆ ಮಾಡಿದರು.

ನಮ್ಮದೇಶದ ಪ್ರಬಲ ಶಕ್ತಿಯಾದ ಪತ್ರಿಕೋದ್ಯಮ, ಪತ್ರಕರ್ತರು, ಈ ದೇಶದ ಎಲ್ಲ ಜನರು ಒಂದೇ ಎಂದು ಹೇಳುವ ಅವಶ್ಯಕತೆಯಿದೆ.

ಪ್ರತಿಯೊಬ್ಬರಿಗೂ ಪ್ರೇರಣಾದಾಯಕವಾದ ಬರವಣಿಗೆಯ ಶಕ್ತಿಯನ್ನು ಪತ್ರಕರ್ತರು ಹೊಂದಬೇಕು ಎಂದು ಅವರು ಸಲಹೆ ಮಾಡಿದರು.

ರಾಜಕೀಯ ಮತ್ತು ಪತ್ರಿಕೋದ್ಯಮ ಸಮಾಜದ ಎರಡು ಕಣ್ಣುಗಳಿದ್ದಂತೆ. ಎರಡೂ ಉತ್ತಮವಾದಾಗ ಸಮಾಜವು ಸಂಪನ್ನವಾಗಿರಲು ಸಾಧ್ಯವಿದೆ.

ಪತ್ರಿಕೆಗಳು ಬರೀ ಟೀಕೆ, ಹೊಗಳಿಕೆಗೆ ಮಾತ್ರ ಸೀಮಿತವಾಗಬಾರದು. ಉತ್ತಮವಾಗಿ ಕೆಲಸ ಮಾಡುವರಿಗೆ ಪ್ರೇರಣೆಯಾಗುವ ಕಾರ್ಯ ಮಾಡಬೇಕು. ಮತ್ತು ಯಾವಾಗಲು ಪ್ರಾಮಾಣಿಕ ಸತ್ಯವನ್ನು ಪ್ರತಿಪಾದಿಸಬೇಕು ಎಂದು ಅವರು ತಿಳಿಸಿದರು.



ಕಣ್ಣು,ಕಿವಿತೆರೆದು ಸಮಾಜವನ್ನು ತಲಸ್ಪರ್ಶಿಯಾಗಿ ನೋಡಿದಾಗಲೇ ಉತ್ತಮ ಪತ್ರಕರ್ತನಾಗಲು ಸಾಧ್ಯವಿದೆ ಎಂದು ಅವರು ಸಲಹೆ ಮಾಡಿದರು.

ಅರಣ್ಯ,ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರು ಮಾತನಾಡಿ, ಬೀದರ ಜಿಲ್ಲೆಯು ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಇಲ್ಲಿ ಪತ್ರಕರ್ತರ ರಾಜ್ಯ ಸಮ್ಮೇಳನ ನಡೆದಿರುವುದು ಸಂತಷ ತಂದಿದೆ ಎಂದರು.

ತನಿಖಾ ಮಾಧ್ಯಮವು ಈಗ ಮರೆಯಾಗುತ್ತಿದೆ. ಈ ಬಗ್ಗೆ ಪತ್ರಕರ್ತರು ಅವಲೋಕನ ಮಾಡಬೇಕು ಎಂದರು.

ಪತ್ರಕರ್ತರಿಗೆ ಸಂರಕ್ಷಣೆ ಕೊಡುವ ವಿಷಯದಲ್ಲಿ ಸರ್ಕಾರ ಬದ್ದವಾಗಿದೆ ಎಂದು ತಿಳಿಸಿದ ಸಚಿವರು,ಪತ್ರಕರ್ತರು ಮಾಧ್ಯಮದ ಪಾವಿತ್ರ್ಯತೆ ಕಾಪಾಡಬೇಕು. ಈ ಮೂಲಕ ರಾಷ್ಟ್ರದ ಅಭಿವೃದ್ದಿಗೆ ಉತ್ತಮ ಕೊಡುಗೆ ನೀಡಬೇಕು ಎಂದು ಸಲಹೆ ಮಾಡಿದರು.

ವಿರೋಧ ಪಕ್ಷದ ನಾಯಕರಾದ ಆರ್ ಅಶೋಕ ಅವರು ಮಾತನಾಡಿ, ಪತ್ರಿಕೋದ್ಯಮವು ಈಗ ಹೊಸ ತಿರುವು ಪಡೆದಿದೆ. ಮಾಧ್ಯಮವನ್ನು ಕಪಿಮುಷ್ಟಿಯಲ್ಲಿಡಬಾರದು. ವಿರೋಧ ಪಕ್ಷದ ಕಾರ್ಯವನ್ನು ಪತ್ರಿಕೋದ್ಯಮ ಮಾಡಬೇಕು. ಎದೆಗಾರಿಕೆಯಿಂದ,ಧೈರ್ಯದಿಂದ ವೃತ್ತಿ ಮಾಡಿದಾಗ ಪತ್ರಿಕಾವೃತ್ತಿಯ ಘನತೆ ಹೆಚ್ಚಲಿದೆ ಎಂದರು.

ಮುಖಂಡರಾದ ಬಂಡೆಪ್ಪ ಖಾಶೆಂಪೂರ ಅವರು ಮಾತನಾಡಿ, ಪತ್ರಿಕಾವೃತ್ತಿ ಈಗ ಕಷ್ಟಕರವಾಗಿದೆ. ಹಾಗಾಗಿ ಸರ್ಕಾರ ಪತ್ರಕರ್ತರಿಗೆ ಸ್ಪಂದನೆ ನೀಡಬೇಕು ಎಂದು ಸಲಹೆ ಮಾಡಿದರು. ಪತ್ರಕರ್ತರ ಸಂಘ ಕಟ್ಟಿದ ಡಿವಿಜಿ ಅವರ ಶ್ರಮವನ್ನು ಸ್ಮರಿಸಬೇಕು ಎಂದು ಸಲಹೆ ಮಾಡಿದರು.

ಸಮಾರಂಭದಲ್ಲಿ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ, ಡಾ.ಸಿದ್ದು ಪಾಟೀಲ, ಮಾರುತಿರಾವ್ ಮೂಳೆ, ರಾಜ್ಯ ಮಾಹಿತಿ ಆಯುಕ್ತರಾದ ಬಿ ವೆಂಕಟಸಿಂಗ್, ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಜಿ ಸಿ ಲೋಕೇಶ, ಮುಖಂಡರಾದ ರಮೇಶ ಪಾಟೀಲ, ಶಕುಂತಲಾ ಬೆಲ್ದಾಳೆ ಹಾಗು ಇತರರು ಇದ್ದರು. ಸಂಘದ ಜಿಲ್ಲಾಧ್ಯಕ್ಷರಾದ ಆನಂದ ದೇವಪ್ಪ ಸ್ವಾಗತಿಸಿದರು. ಸಮಾರಂಭದ ಬಳಿಕ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಫಲಿತಾಂಶ: ಕೊಟ್ಟೂರೇಶ್ವರ ಸಂಯುಕ್ತ ಸಾಧನೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ಶ್ರೀ ಕೊಟ್ಟೂರೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜು, ಪಂಪಾನಗರ ಗಂಗಾವತಿ ಸದರಿ ವಿದ್ಯಾಲಯದ 2026 ರ ಪಿ.ಯು.ಸಿ ದ್ವಿತೀಯ ವಾರ್ಷಿಕ ಪರೀಕ್ಷೆಯ ಫಲಿತಾಂಶ ಶೇಕಡಾವಾರು 89.47 ಇರುತ್ತದೆ. 12 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 56 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 31 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಹಾಗೂ 01 ತೃತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿ ವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.

ಕಲಾ ವಿಭಾಗದಲ್ಲಿ ಸುನೀತಾ ನೇಮಪ್ಪ 567 ಅಂಕ, ರೇಖಾ ಯಮನೂರಪ್ಪ 560, ಅನೀಲಕುಮಾರ 549 ಅಂಕಗಳನ್ನು ಪಡೆದಿದ್ದರೆ, ವಾಣಿಜ್ಯ ವಿಭಾಗದಲ್ಲಿ ರಾಹುಲ್ ಜಾಧವ 581, ಸೋಮೇಶ ರಮೇಶ 579, ನಿಖಿತಾ ಚವ್ಹಾಣ 538 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ.



ಸಂಸ್ಥೆಗೆ ಕೀರ್ತಿ ತಂದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮ.ನಿ.ಪ್ರಡಾ. ಕೊಟ್ಟೂರು ಮಹಾಸ್ವಾಮಿಗಳು, ಕಾರ್ಯದರ್ಶಿಗಳಾದ ಶರಣೇಗೌಡ ಮಾಲಿಪಾಟೀಲ್ ಮತ್ತು ಪ್ರಾಚಾರ್ಯರಾದ ಚಂದ್ರಶೇಖರ ಹಾಗೂ ಬೋಧಕ ಸಿಬ್ಬಂದಿಯವರು ಅಭಿನಂದನೆ ಸಲ್ಲಿಸಿದ್ದಾರೆ.

ಸಮ್ಮೇಳನಾಧ್ಯಕ್ಷರಾಗಿ ಶ್ರೀನಿವಾಸ ಚಿತ್ರಗಾರ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ತಾಲೂಕು 2ನೇ ಚುಟುಕು ಸಾಹಿತ್ಯ ಸಮ್ಮೇಳನವು ಬರುವ ಮೇ ತಿಂಗಳ ಕೊನೆವಾರದಲ್ಲಿ ಕೊಪ್ಪಳ ನಗರ ಅಥವಾ ಗ್ರಾಮೀಣ ಭಾಗದಲ್ಲಿ ನಡೆಸಲು ತೀರ್ಮಾನಿಸಿದ್ದು, ಈ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಶಿಕ್ಷಕರು ಹಾಗೂ ಕವಿಗಳಾದ ಶ್ರೀನಿವಾಸ ಚಿತ್ರಗಾರ ಅವರನ್ನು ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ ಎಂದು ಚುಟುಕು ಸಾಹಿತ್ಯ ಪರಿಷತ್ತಿನ ಗಂಗಾವತಿ ತಾಲೂಕ ಅಧ್ಯಕ್ಷರಾದ ಅಶೋಕ ಗುಡಿಕೋಟಿ ಹೇಳಿದರು.



ಈ ಪೂರ್ವಭಾವಿ ಸಭೆಯಲ್ಲಿ ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ರುದ್ರಪ್ಪ ಭಂಡಾರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಡಾ. ಮಹಾಂತೇಶ್ ನೆಲಾಗಣಿ, ತಾಲೂಕು ಅಧ್ಯಕ್ಷ ಮೈಲಾರಪ್ಪ ಉಂಕೀ, ಪದಾಧಿಕಾರಿಗಳಾದ ಶಿವಪ್ರಸಾದ ಹಾದಿಮನಿ, ಶಿವಪ್ಪ ಕೋಗಳಿ, ಬಸವಶ್ರೀ ಸೋಮನಾಳ ಇತರರು ಹಾಜರಿದ್ದರು.

ಶ್ರೀನಿವಾಸ ಚಿತ್ರಗಾರ ಅವರು ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮದವರಾಗಿದ್ದು, ಇವರು ಯತ್ನಟ್ಟಿಯ ಸ.ಹಿ.ಪ್ರಾ ಶಾಲೆಯಲ್ಲಿ ಶಾಲೆಯಲ್ಲಿ ಶಿಕ್ಷಕರಾಗಿದ್ದು, ಇವರು ಒಬ್ಬ ಹಿರಿಯ ಕವಿಯಾಗಿ 15ಕ್ಕೂ ಅಧಿಕ ಮಕ್ಕಳ ಸಾಹಿತ್ಯ ಸೇರಿದಂತೆ ಇತರ ಪುಸ್ತಕಗಳನ್ನು ಹೊರತಂದಿದ್ದಾರೆ. ಅಲ್ಲದೇ ವಿವಿಧ ಕವಿಗೋಷ್ಠಿಯಲ್ಲಿ ಹಾಗೂ ಸಭೆ ಸಮಾರಂಭಗಳಲ್ಲಿ ಉದ್ಘಾಟಕರಾಗಿ, ಅಧ್ಯಕ್ಷರಾಗಿ, ಉಪ ನ್ಯಾಸಕರಾಗಿ ಭಾಗವಹಿಸಿದ್ದಾರೆ. ಸ್ಥಳೀಯ ಸಾಹಿತ್ಯ ಸಮ್ಮೇಳನಗಳ ಕೆಲವು ಸ್ಮರಣ ಸಂಚಿಕೆಗಳಲ್ಲಿ ಸಂಪಾದಕ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರನ್ನು ಕೊಪ್ಪಳ ತಾಲೂಕು 2ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲು ಸೂಕ್ತ ವ್ಯಕ್ತಿಯಾಗಿದ್ದಾರೆ ಎಂದು ತಿಳಿಸಿದರು.

371ಜೆ ತಿದ್ದುಪಡಿಯಿಂದ ಪ್ರಗತಿಯ ಪಥದಲ್ಲಿ ಕಲ್ಯಾಣ ಕರ್ನಾಟಕ

• ಮಲ್ಲಮ್ಮ ನುಡಿ ವಾರ್ತೆ ಬೀದರ್

371 ಜೆ ಸಾಂವಿಧಾನಿಕ ತಿದ್ದುಪಡಿಯಿಂದಾಗಿ ಕಲ್ಯಾಣ ಕರ್ನಾಟಕ ಪ್ರಗತಿಯ ಪಥದಲ್ಲಿ ಸಾಗುತ್ತಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಬೀದರ್ ನ ಝೀರಾ ಕನ್ವೆನ್ಷನ್ ಹಾಲ್ ನಲ್ಲಿ ನಡೆದ 2 ದಿನಗಳ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಭಾಗದ ಅಭಿವೃದ್ಧಿಗೆ ಮಾಧ್ಯಮಗಳು ಸಲಹೆ ನೀಡುವ ಮೂಲಕ ಸಹಕಾರ ನೀಡಬೇಕು ಎಂದರು.

ಅಭಿವ್ಯಕ್ತಿ ಸ್ವಾತಂತ್ರ್ಯದ ನೆಲೆಗಟ್ಟಿನಲ್ಲಿ ಮಾಧ್ಯಮಗಳು ಕಾರ್ಯನಿರ್ವಹಿಸುತ್ತಿದ್ದು, ಪತ್ರಿಕಾ ಸ್ವಾತಂತ್ರ್ಯ ಪತ್ರಕರ್ತರಿಗೆ ಜೀವಾಳವಾಗಿದೆ ಎಂದ ಅವರು, ಎಲ್ಲ ಕ್ಷೇತ್ರದಲ್ಲೂ ಸ್ಪರ್ಧೆ ಇದೆ. ಮಾಧ್ಯಮ ರಂಗದಲ್ಲೂ ಸ್ಪರ್ಧೆ ಇದೆ. ನಾವೇ ಮೊದಲು ಎಂಬ ಧಾವಂತದಲ್ಲಿ ಅಸತ್ಯವಾದ ಸುದ್ದಿಗಳು, ಆಧಾರ ರಹಿತ ಸುದ್ದಿಗಳು ಬಿತ್ತರವಾಗದಂತೆ ಮಾಧ್ಯಮಗಳು ಎಚ್ಚರ ವಹಿಸಬೇಕು ಎಂದು ಹೇಳಿದರು. ಜನಾಭಿಪ್ರಾಯ ಮೂಡಿಸುವಲ್ಲಿ ಮಾಧ್ಯಮಗಳ ಪಾತ್ರ ಹಿರಿದಾಗಿದೆ. ಪತ್ರಕರ್ತರ ಮುಂದೆ ಸವಾಲುಗಳಿವೆ. ಕಷ್ಟದ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುವ ಪತ್ರಕರ್ತರಿಗೆ ರಕ್ಷಣೆ ನೀಡುವ ನೀಟ್ಟಿನಲ್ಲಿ ಸರ್ಕಾರ ಸ್ಪಂದಿಸಲಿದೆ ಎಂದರು.

ಮಾಧ್ಯಮಗಳು ಸಮಾಜದ ಓರೆ, ಕೋರೆಯನ್ನು ಎತ್ತಿ ತೋರಿಸುವುದರ ಜೊತೆಗೆ ಜನರಲ್ಲಿ ಜಾಗೃತಿ ಮೂಡುತ್ತಿದ್ದವು. 20–30 ವರ್ಷಗಳ ಹಿಂದೆ ಪತ್ರಿಕೆಯಲ್ಲಿ ಯಾವುದಾದರೂ ಅಧಿಕಾರಿಯ, ಜನಪ್ರತಿನಿಧಿ ಭ್ರಷ್ಟಾಚಾರಿ ಎಂದು ಪ್ರಕಟವಾದರೆ ಅವರು ಕುಗ್ಗಿ ಹೋಗುತ್ತಿದ್ದರು. ಸಮಾಜ ಅವರನ್ನು ನಿಕೃಷ್ಟವಾಗಿ ಕಾಣುತ್ತಿತ್ತು. ಹೀಗಾಗಿ ಮಾಧ್ಯಮಗಳು ಅದೇ ಹಿಂದಿನ ವಿಶ್ವಾಸಾರ್ಹತೆ ಗಳಿಸಬೇಕು ಎಂದರು. ಮಾಧ್ಯಮಗಳು ಸಮಾಜದ ನಾಲ್ಕನೇ ಅಂಗವಾಗಿವೆ. ಇಂದು ರಾಜ್ಯದಲ್ಲಿ ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವನಾಗಿ ನಾನು ಕಾರ್ಯ ನಿರ್ವಹಿಸುತ್ತಿದ್ದೇನೆ. ಇಂದು ರಾಜ್ಯದಲ್ಲಿ ಪ್ರಕೃತಿ, ಪರಿಸರ ಹಾಗೂ ಅರಣ್ಯ ಉಳಿದಿದ್ದರೆ ಅದರಲ್ಲಿ ಮಾಧ್ಯಮಗಳ ಪಾತ್ರವೂ ಹಿರಿದಾಗಿದೆ ಎಂದರು.